# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 170 Issue: 170 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 07.01.2025 07.01.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS
1,00,000+ Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ


ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


# ಅಂತೂ ನಮ್ಮೂರಿಗೆ ಬಸ್ ಬಂತು

## ಮಾಳೆಹಳ್ಳಿ ಗ್ರಾಮಕ್ಕೆ ಸಾರಿಗೆ ಸೌಲಭ್ಯ । ಹರ್ಷಗೊಂಡ ವಿದ್ಯಾರ್ಥಿಗಳು, ಗ್ರಾಮಸ್ಥರು




**ಹಂಪಿ ಟೈಮ್ಸ್ ಕೂಡ್ಲಿಗಿ**


ಬಸ್ ಸಂಪರ್ಕ ಇಲ್ಲದ ಗ್ರಾಮದಲ್ಲಿ ಸಾರಿಗೆ ಬಸ್ ಸದ್ದಾಗುತ್ತಿದ್ದಂತೆ ಮಕ್ಕಳು ಗ್ರಾಮಸ್ಥರ ಮೊಗದಲ್ಲಿ ಹರ್ಷವೇ ಹರ್ಷ. ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಇದ್ದರೆ ಅಸಾಧ್ಯವಾವುದೂ ಇಲ್ಲ ಎನ್ನುವಂತೆ ಗಡಿ ಹಳ್ಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದೇ ಸಾಕ್ಷಿ.

ಹೌದು, ತಾಲೂಕಿನ ಪೂಜಾರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗಡಿ ಗ್ರಾಮವಾದ ಮಾಳೆಹಳ್ಳಿಗೆ ಇಲ್ಲಿವರೆಗೂ ಈ ಗ್ರಾಮಕ್ಕೆ ಯಾವುದೇ ಬಸ್ಸಿನ ವ್ಯವಸ್ಥೆ ಇರಲಿಲ್ಲ. ಆಸ್ಪತ್ರೆಗೆ ಹೋಗಲು, ಪಡಿತರ ಅಕ್ಕಿ ತರಲು, ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಮತ್ತು ಸರ್ಕಾರಿ ಕಚೇರಿಗಳಿಗೆ ತೆರಳಲು ಈವರೆಗೂ ಖಾಸಗಿ ವಾಹನಗಳನ್ನೆ ಅನಿವಾರ್ಯವಾಗಿ ಅವಲಂಬಿಸಬೇಕಾಗಿತ್ತು. ನವಂಬರ್ 22ರಂದು ಹಂಪಿ ಟೈಮ್ಸ್ ಪತ್ರಿಕೆಯಲ್ಲಿ "**ನಮ್ಮ ಧ್ವನಿನೂ ಸ್ವಲ್ಪ ಕೇಳಿಸಿಕೊಳ್ಳಿ ಸ್ವಾಮಿ**" ಎನ್ನುವ ಶೀರ್ಷಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು. ಸುದ್ದಿಯಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ಈ ಗ್ರಾಮಕ್ಕೆ ಭೇಟಿ ಮಾಡಿ, ಜನರ ಬೇಡಿಕೆಗೆ ಸ್ಪಂದಿಸಿ, ಬಸ್ಸಿನ ವ್ಯವಸ್ಥೆ ಕಲ್ಪಿಸಿ ಕೊಟ್ಟಿದ್ದಾರೆ. ಗ್ರಾಮಕ್ಕೆ ಸರ್ಕಾರಿ ಬಸ್ ಬಂದಿರುವುದು ಕಂಡು ಗ್ರಾಮದವರು, ಸರ್ಕಾರಿ ಬಸ್ಸಿಗೆ ಪೂಜೆ ಮಾಡಿ ಸ್ವಾಗತ ಮಾಡಿಕೊಂಡು ಸಂತಸ ವ್ಯಕ್ತಪಡಿಸಿದರು. ಇದೇ ವೇಳೆಗ್ರಾಮ ಪಂಚಾಯತಿ ಮಾಜಿ ಸದಸ್ಯ ಕೋಟೆ ರಾಜಣ್ಣ, ನಿವೃತ್ತಿ ಶಿಕ್ಷಕ ಮಂಜುನಾಥ, ಗೋಕರ್ಣ, ಜಿ.ಬಿ.ಬಸವರಾಜ್, ಹಾಲಿ ಸದಸ್ಯ ರವೀಂದ್ರ, ದಲಿತ ಮುಖಂಡ ಎಚ್.ಟಿ.ಬಸವರಾಜ್, ಎ.ಕೆ ಮಂಜಪ್ಪ, ತಿಮ್ಮಾರೆಡ್ಡಿ, ರಾಜಣ್ಣ, ನಾಗೇಂದ್ರ ರಘು ಸೇರಿದಂತೆ ಮಕ್ಕಳು ಮಹಿಳೆಯರು ಗ್ರಾಮಸ್ಥರಿದ್ದರು.

> ನಮ್ಮ ಊರಿನ ಜನರ ಬಹು ದಿನಗಳ ಕನಸು ಈಗ ನನಸಾಗಿದೆ. ತಾಲೂಕಿನ ಗಡಿಹಳ್ಳಿಗೆ ಅಧಿಕಾರಿಗಳು ಬಸ್ ವ್ಯವಸ್ಥೆ ಕಲ್ಪಿಸುವಂತೆ ಗಮನ ಸೆಳೆದ ಹಂಪಿ ಟೈಮ್ಸ್ ಪತ್ರಿಕೆಗೂ ಮತ್ತು ಸಾರಿಗೆ ಸೌಲಭ್ಯ ಕಲ್ಪಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳಿಗೂ ಧನ್ಯವಾದಗಳು. ನಮ್ಮೂರ ಹಳ್ಳಿ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಮತ್ತಷ್ಟು ಸರ್ಕಾರಿ ಸೌಲಭ್ಯಗಳು ಕಲ್ಪಿಸಲಿ
>
> – ಕೋಟೆ ರಾಜಣ್ಣ, ಗ್ರಾಮ ಪಂಚಾಯತಿ ಮಾಜಿ ಸದಸ್ಯ, ಮಾಳೆಹಳ್ಳಿ.

> ನಮ್ಮ ಧ್ವನಿಗೆ ಕಿವಿಗೊಟ್ಟು, ಗಡಿಗ್ರಾಮಕ್ಕೆ ಸಾರಿಗೆ ಸೌಲಭ್ಯ ಒದಗಿಸಿ, ಶಾಲೆಗಳಿಗೆ ತೆರಳಲು ಅನುಕೂಲ ಕಲ್ಪಿಸಿದ ಅಧಿಕಾರಿಗಳಿಗೆ ಹೃದಯಪೂರ್ವಕ ಧನ್ಯವಾದಗಳು.
>
> – ವಿದ್ಯಾರ್ಥಿಗಳು, ಮಾಳೆಹಳ್ಳಿ

## ಆನಂದ ಬಾಣ






ಹೊಸಪೇಟೆ: ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್‌ನ ಮಾಜಿ ಸದಸ್ಯರು ಹಾಗೂ ಸಾಹಿತಿಯು ಆದ ನಾ. ಡಿಸೋಜ ಅವರ ನಿಧನಕ್ಕೆ ಕನ್ನಡ ವಿವಿ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರು ಸಂತಾಪ ಸಭೆಯಲ್ಲಿ ಅಗಲಿದ ಚೇತನಕ್ಕೆ ಪುಷ್ಪನಮನ ಸಲ್ಲಿಸಿ, ಆತ್ಮಕ್ಕೆ ಶಾಂತಿಕೋರಿದರು. ಸಂತಾಪ ಸಭೆಯಲ್ಲಿ ಪ್ರಾಧ್ಯಾಪಕರು, ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

## ಮೈಕ್ರೋ ನ್ಯೂಸ್

### ಜ.7 ರಂದು ಮೈಲಾರ, ಕುರುವತ್ತಿ ಜಾತ್ರೋತ್ಸವದ ಪೂರ್ವಸಿದ್ಧತಾ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಮೈಲಾರ ಲಿಂಗೇಶ್ವರಸ್ವಾಮಿ ಕಾರ್ಣಿಕೋತ್ಸವ ಜಾತ್ರೆ ಮತ್ತು ಕುರುವತ್ತಿ ಶ್ರೀಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀಬಸವೇಶ್ವರ ಸ್ವಾಮಿ ದೇವಸ್ಥಾನದ ರಥೋತ್ಸವ ಜಾತ್ರೆಯ ಪೂವಭಾವಿ ಸಭೆಯನ್ನು ಜ.7ರಂದು ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯನಿರ್ವಾಹಕ ಅಧಿಕಾರಿ ಹೆಚ್. ಗಂಗಾಧರಪ್ಪ ತಿಳಿಸಿದ್ದಾರೆ.

ಫೆ.4 ರಿಂದ ಫೆ.15 ರವರೆಗೆ ಶ್ರೀಮೈಲಾರ ಲಿಂಗೇಶ್ವರಸ್ವಾಮಿ ದೇವಸ್ಥಾನದ ಕಾರ್ಣಿಕೋತ್ಸವ ಜಾತ್ರೆ, ಹಾಗೂ ಫೆ.22 ರಿಂದ ಮಾ.1 ರವರೆಗೆ ಕುರುವತ್ತಿ ಶ್ರೀಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀಬಸವೇಶ್ವರಸ್ವಾಮಿ ದೇವಸ್ಥಾನದ ರಥೋತ್ಸವಗಳು ಅದ್ದೂರಿಯಾಗಿ ಜರುಗಲಿದ್ದು, ಈ ಎರಡು ದೇವಾಲಯಗಳ ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಜಾತ್ರಾ ಪೂರ್ವಭಾವಿ ಸಿದ್ದತಾ ಸಭೆಯನ್ನು ಜ.07 ರಂದು ಮದ್ಯಾಹ್ನ 3 ಗಂಟೆಗೆ ಶ್ರೀಮೈಲಾರ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಸಮುದಾಯ ಭವನ ಮೈಲಾರದಲ್ಲಿ ಏರ್ಪಡಿಸಲಾಗಿದೆ. ಅದೇ ದಿನ ಸಂಜೆ 5 ಗಂಟೆಗೆ ಕುರುವತ್ತಿ ಗ್ರಾಮದಲ್ಲಿರುವ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಹೂವಿನಹಡಗಲಿ ಶಾಸಕ ಕೃಷ್ಣನಾಯ್ಕ, ಡಿಸಿ ಎಂ.ಎಸ್.ದಿವಾಕರ್ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.


For Events Coverage
Contact
94486 33038


# ಮತದಾರರ ಪರಿಷ್ಕರಣೆ ಅಂತಿಮ ಪಟ್ಟಿ ಬಿಡುಗಡೆ : ಡಿಸಿ

## ಪುರುಷ 5,66,240, ಮಹಿಳೆ 5,71,967, ಇತರೆ 139 ಒಟ್ಟು ಮತದಾರರು 11,38,346

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಕರಡು ಮತದಾರರ ಪಟ್ಟಿ ಪರಿಷ್ಕರಣೆ ನಂತರ ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ್ ಬಿಡುಗಡೆ ಗೊಳಿಸಿ ಮುದ್ರಣ ಪ್ರತಿಯನ್ನು ರಾಜಕೀಯ ಪಕ್ಷದ ಜಿಲ್ಲಾಧ್ಯಕ್ಷರಿಗೆ ಉಚಿತವಾಗಿ ವಿತರಿಸಿದರು.



ಬಳಿಕ ಅವರು ಸುದ್ದಿಗಾರ ರೊಂದಿಗೆ ಮಾತನಾಡಿ, ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರ ದಲ್ಲಿ ಒಟ್ಟು 1234 ಮತಗಟ್ಟೆ ಕೇಂದ್ರ ಗಳಲ್ಲಿ ಮತಗಟ್ಟೆ ಮಟ್ಟದ ಅಧಿ ಕಾರಿಗಳು ತಮ್ಮ ಮತಗಟ್ಟೆ ಕೇಂದ್ರ ದಲ್ಲಿ ಅಂತಿಮ ಮತದಾರ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಚಾರ ಪಡಿಸಲಾ ಗುವುದು. ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾ ವೆಬ್‌ಸೈಟ್ vijayanagara.nic.in ನಲ್ಲಿ ಹಾಗೂ ಆಯೋಗದ ಪೋರ್ಟ್‌ಲ್ ಮತ್ತು ವೋಟರ್ ಹೆಲ್ಪ್‌ಲೈನ್ ಆಪ್‌ನಲ್ಲಿ ಅಪಡೇಟ್ ಮಾಡಲಾಗಿರುತ್ತದೆ. ಜಿಲ್ಲೆಯ ಎಲ್ಲಾ ಮತದಾರರು ತಮ್ಮ ಮಾಹಿತಿಯನ್ನು ಪರಿಶೀಲನೆ ಮಾಡಿಕೊಳ್ಳಬೇಕು. ಪರಿಷ್ಕರಣೆ ಪಟ್ಟಿಯ ಅನುಸಾರ ಜಿಲ್ಲೆಯಲ್ಲಿ 374 ಸೇವಾ ಮತ ದಾರರು, 21,500 ಯುವ ಮತ ದಾರರು, 16,163 ವಿಕಲಚೇತನ ಮತದಾರರು ನೊಂದಾಣಿ ಮಾಡಿಕೊಂಡಿದ್ದಾರೆ. ಐದು ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡ ಒಟ್ಟು ಮತದಾರರಲ್ಲಿ ಪುರುಷ 5,66,240, ಮಹಿಳೆ 5,71,967, ಇತರೆ 139 ಒಟ್ಟು ಮತದಾರರು 11,38,346 ಅಂತಿಮ ಪಟ್ಟಿಯಲ್ಲಿ ನೊಂದಾಣಿಯಾಗಿದೆ. ಅಂತಿಮ ಮತದಾರ ಪಟ್ಟಿ ಪ್ರಕಟಣೆಯ ನಂತರ ಯಾವುದೇ ಮತದಾರರ ನೊಂದಣೆ ಮಾಡಲು ಸಾಧ್ಯವಾಗದೇ ಇದ್ದಲ್ಲಿ ಆಯೋಗದ ವೆಬ್‌ಸೈಟ್‌ನಲ್ಲಿ ಹಾಗೂ ವೋಟರ್ ಹೆಲ್ಪ್‌ಲೈನ್‌ನಲ್ಲಿ ನಿರಂತರ ಮತದಾರ ನೋಂದಾಣಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ. ಈ ವೇಳೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಭಾಗವಹಿಸಿದ್ದರು.


**ಹಂಪಿ ಟೈಮ್ಸ್ SSLC ಮಾರ್ಗದರ್ಶಿ**
ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com



JNANASUDHA INSTITUTIONS
KARKALA - MANIPAL - UDUPI
Units of Ajekar Padma Gopal Education Trust (R)

STAFF REQUIRED

LECTURERS IN
Physics, Chemistry, Mathematics, Biology
Computer Science, Hindi, Sanskrit, English, Commerce.

TRAINED GRADUATE TEACHERS
Social/English, Physics/Mathematics, Chemistry/Biology,
Kannada, Hindi, English & Physical Education Teacher.

NON-TEACHING
Lab Assistants (B.Sc), Librarian (B.Lib), Staff
Nurses, Boys & Girls Hostel Care Takers, School
Bus Drivers & Lady Care Takers.

Log on to www.jnanasudha.org & Apply on before 10-01-2025
Contact : 8147454895





# ಮನೆ ಮನೆಗೆ ಶಾಸಕರು, ಮನೆ ಬಾಗಿಲಿಗೆ ಸರ್ಕಾರ

## ಡಾ.ಎನ್.ಟಿ.ಶ್ರೀನಿವಾಸ ಹೇಳಿಕೆ । ಗ್ರಾಮದ ಕುಂದುಕೊರತೆಗಳನ್ನು ಆಲಿಸುವುದು । ಅಧಿಕಾರಿಗಳಿಂದ ಸ್ಥಳದಲ್ಲೇ ಪರಿಹಾರ.



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಗಡಿಗ್ರಾಮ ಅಪ್ಪೇನಹಳ್ಳಿ ಗ್ರಾಪಂ ವ್ಯಾಪ್ತಿಯ ಕೆ.ರಾಯಾಪುರ ಗ್ರಾಮದಿಂದ ಮನೆ ಮನೆಗೆ ಶಾಸಕರು, ಮನೆ ಬಾಗಿಲಿಗೆ ಸರ್ಕಾರ ಎಂಬ ವಿನೂತನ ಕಾರ್ಯಕ್ರಮಕ್ಕೆ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಚಾಲನೆ ನೀಡಿದರು.

ಕ್ರೀಯಾಶೀಲತೆ ಇದ್ದರೆ, ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಉದಾಹರಣೆಯಾಗಿದ್ದಾರೆ. ಕ್ಷೇತ್ರದ ಪ್ರತಿಯೊಂದು ಮನೆಯ ಸಂಪೂರ್ಣ ಮಾಹಿತಿ ದಾಖಲಿಸಲು 160 ಮಾಹಿತಿ ದಾಖಲಿಸುವಂಥ ಆಪ್ ಸಿದ್ಧಪಡಿಸಿಕೊಂಡು ತಾಲೂಕಿನ ಗಡಿಭಾಗದ ಕೆ. ರಾಯಾಪುರ ಪರಮೇಶ್ವರ ಮಠದಿಂದ ಸೋಮವಾರ ಪ್ರಾರಂಭಿಸಿದ್ದಾರೆ. ಅದು ತನ್ನ ಸ್ವಂತ ಖರ್ಚಿನಲ್ಲೇ ಸರ್ವೆಗೆ ಮುಂದಾಗಿರುವುದು ಇಲ್ಲಿ ಗಮನಾರ್ಹಅಂಶವಾಗಿದೆ.

ರಾಜ್ಯದಲ್ಲೇ ಮೊದಲು: ಜನರಿಂದ ಆರಿಸಿ ಬಂದಮೇಲೆ, ಜನರ ಕಷ್ಟಗಳಿಗೆ ನಿತ್ಯ ಆಗುವುದು ಶಾಸಕ ಶ್ರೀನಿವಾಸ್ ಕಂಡುಕೊಂಡು ಉಪಾಯ ಇದು. ಕ್ಷೇತ್ರದ ಮನೆ, ಮನೆಯ ಚಿತ್ರಣವನ್ನು ಜಾಗತೀಕರಣ ಇಂದಿನ ಯುಗದಲ್ಲಿ ಕಷ್ಟವೇ ಅಲ್ಲ ಎಂಬುದನ್ನು ಕಂಡುಕೊಂಡು, ಅದಕ್ಕೊಂದು ಆಪ್‌ನ್ನು ಸಿದ್ಧಪಡಿಸಿಕೊಂಡು ಶಾಸಕರ ಜೊತೆಗೂಡಿ ತಾಲೂಕು ಆಡಳಿತ ಗ್ರಾಮದ ಮನೆ, ಮನೆಗಳಿಗೆ ಹೋಗಿ ಸರ್ವೇ ಕಾರ್ಯವನ್ನು ಸೋಮವಾರ ಆರಂಭಿಸಿರುವುದು ಬಹುತೇಕ ರಾಜ್ಯದಲ್ಲಿ ಇದೇ ಮೊದಲಾಗಿದೆ ಎನ್ನುವುದು ಪ್ರಜ್ಞಾವಂತರ ಅನಿಸಿಕೆಯಾಗಿದೆ. ಐಷರಾಮಿಯಾಗಿ ಎಲ್ಲೋ ಕುಳಿತು, ಅನುದಾನ ಇಲ್ಲ, ನಾನೇನು ಮಾಡಲಿ ಎನ್ನುವ ಬದಲು, ಇರುವ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ, ಸೌಲಭ್ಯಗಳಿಂದ ವಂಚಿತರಾದವರಿಗೆ ಅನುಕೂಲ ಕಲ್ಪಿಸಲು ಕ್ಷೇತ್ರದ ಪ್ರತಿಯೊಂದು ಮನೆ ಬಾಗಿಲಗಳಿಗೆ ಸ್ವಯಂ ಶಾಸಕರೇ ಹೋಗುವುದು ಅತ್ಯಂತ ಸೂಕ್ತವಾದ ಕೆಲಸವಾಗಿದೆ. ತಾಲೂಕು ಅಧಿಕಾರಿಗಳು ಜೊತೆಯಲ್ಲಿ ಇರುವುದರಿಂದ ತ್ವರಿತವಾಗಿ ಪರಿಹಾರ ಸಿಗುತ್ತದೆ. >>4

> ತಾಲೂಕಾದ್ಯಂತ ಗ್ರಾಪಂ ವ್ಯಾಪ್ತಿಯ ಸಮಗ್ರ ಹಳ್ಳಿಗಳ ಪ್ರತಿ ಕುಟುಂಬದ ಕುರಿತು 160 ಮಾಹಿತಿಗಳನ್ನು ಸಂಗ್ರಹಿಸುವ ಮೂಲಕ, ತಾಲೂಕು ಮಟ್ಟದ ಅಧಿಕಾರಿಗಳನ್ನು ಕರೆಸಿಕೊಂಡು ಸ್ಥಳದಲ್ಲೇ ಪರಿಹಾರ ವನ್ನು ಒದಗಿಸುವುದು ಮೊದಲ ಆಧ್ಯತೆಯಾಗಿದೆ. ಈ ಮಾಹಿತಿಯಿಂದಲೇ ಅನುದಾನ ವನ್ನು ತರಲು ಹೆಚ್ಚಿನ ಅನುಕೂಲವಾಗಿದೆ.
>
> – ಡಾ.ಎನ್.ಟಿ. ಶ್ರೀನಿವಾಸ್, ಶಾಸಕ

## ಸ್ಟುಡೆಂಟ್ ಕಾಲಂ

### ಸಾಧನೆಗೆ ಆತ್ಮವಿಶ್ವಾಸವೇ ಆಯುಧ



ಸಿದ್ದವನಹಳ್ಳಿ ಎಂಬ ಸಣ್ಣ ಊರು.ಆ ಊರಿನಲ್ಲಿ ಸವಿತಾ ಮತ್ತು ಕವಿತಾ ಎಂಬ ಇಬ್ಬರು ಗೆಳತಿಯರಿದ್ದರು. ಗೆಳತಿಯರ ಸ್ನೇಹ ಊರಿನ ಜನರಲ್ಲಿ ಭಾರಿ ಖ್ಯಾತಿ ಪಡೆದಿತ್ತು. ಊರಿನಲ್ಲಿ ಯಾರಾದರೂ ಒಂದೇ ವಾರಿಗೆಯ ಗೆಳೆಯರು ಹಾಗೂ ಗೆಳತಿಯರು ಜಗಳ ಮಾಡಿಕೊಂಡರೆ ಅದನ್ನು ಪರಿಹರಿಸಲು ಬಂದ ಹಿರಿಯರು ಸವಿತಾ ಮತ್ತು ಕವಿತಾ ಇವರ ಬಿಡಿಸಲಾಗದ ಬಂಧದ ಗೆಳೆತನದ ನಿದರ್ಶನ ಕೊಟ್ಟು ಬೇರ್ಪಡುವ ಹಂತಕ್ಕೆ ತಲುಪಿದಂತಹ ಗೆಳೆತನವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿದ್ದರು. ಆ ಮಟ್ಟಿಗೆ ಎರಡು ದೇಹ, ಒಂದು ಜೀವ ಎನ್ನುವಂತೆ ಸವಿತಾ ಮತ್ತು ಕವಿತಾ ರವರ ಸ್ನೇಹವಿತ್ತು. ಸಿದ್ದವನಹಳ್ಳಿ ಹೇಳಿಕೇಳಿ ಮೊದಲೇ ಸಣ್ಣ ಊರು. ಅಬ್ಬಬ್ಬಾ ಎಂದರೆ ನೂರರಿಂದ ನೂರೈವತ್ತು ಮನೆಗಳನ್ನು ಹೊಂದಿರುವ ಹಳ್ಳಿ. ಈ ಹಳ್ಳಿಯಲ್ಲಿನ ಸವಿತಾ ಮತ್ತು ಕವಿತಾ ಗೆಳತಿಯರಿಬ್ಬರು ಸರ್ಕಾರಿ ಹುದ್ದೆಗಳನ್ನು ಒಟ್ಟಿಗೆ ಪಡೆಯುವುದು ಅವರ ಕನಸಾಗಿತ್ತು. ಆ ನಿಟ್ಟಿನಲ್ಲಿ ಗೆಳತಿಯರಿಬ್ಬರು ರಾತ್ರಿ–ಹಗಲೆನ್ನದೆ ಕೂಡಿ ವಿದ್ಯಾಭ್ಯಾಸ ಮಾಡುತ್ತಾ ವಿಷಯ ವಿನಿಮಯದೊಂದಿಗೆ ಆತ್ಮ ವಿಶ್ವಾಸದಿಂದ ಸರ್ಕಾರಿ ಹುದ್ದೆ ಪಡೆಯಲಿಕ್ಕೆ ಸಿದ್ಧತೆ ನಡೆಸಿದರು. ಬಳಿಕ ಹುದ್ದೆಯ ಪರೀಕ್ಷೆ ಎದುರಿಸಿ ಎರಡು ಬಾರಿ ವಿಫಲತೆ ಹೊಂದಿದರು. ಆದರೆ ಛಲ ಬಿಡದೆ ಮತ್ತೆ ಇಬ್ಬರು ಸಾಧಿಸಲೇಬೇಕು ಎನ್ನುವ ಧೃಡ ಆತ್ಮವಿಶ್ವಾಸದಿಂದ ಕಠಿಣ ಪರಿಶ್ರಮದಿಂದ ಸತತ ಅಧ್ಯಯನ ನಡೆಸಿ ಮಾರನೇ ವರ್ಷವೇ ಸರ್ಕಾರಿ ಹುದ್ದೆಗೆ ನಿಗದಿ ಪಡಿಸಿದ ಪರೀಕ್ಷೆಯಲ್ಲಿ ಪಾಸಾಗಿ ಇಬ್ಬರೂ ಸರ್ಕಾರಿ ಹುದ್ದೆಯನ್ನು ಪಡೆದುಕೊಂಡರು. ಅಲ್ಲಿಯವರೆಗೆ ಆ ಊರಿನ ಜನರ ಬಾಯಿಯಲ್ಲಿ ಅನುರಣಿಸುತ್ತಿದ್ದ ಅವರ ಗೆಳೆತನದ ಬಂಧದ ಜೊತೆಗೆ ಸಾಧನೆಯ ಸಾಕಾರತೆಗೆ ಸವಿತಾ ಮತ್ತು ಕವಿತಾ ಹೊಂದಿದ ಆತ್ಮ ವಿಶ್ವಾಸದ ಮಹತ್ವ ಕೂಡಾ ಜನರ ಬಾಯಲ್ಲಿ ವರ್ಣಿತವಾಗುತ್ತಿತ್ತು. ಅದನ್ನು ಕೇಳಿಸಿಕೊಂಡ ಗೆಳತಿಯರ ಆನನದಲ್ಲಿ ಆನಂದ ಒಡಮೂಡುತ್ತಿತ್ತು. ನಮ್ಮಲ್ಲಿ ಆ ಆನಂದ ಬರಬೇಕಾದರೆ ಅಂತಹ ಸಾಧನೆ ನಮಲ್ಲಿ ಬರಬೇಕು. ಆ ಸಾಧನೆಗೆ ಪೂರಕವಾದ ಆತ್ಮವಿಶ್ವಾಸದ ಪರಿಶ್ರಮದಿಂದ ಅದನ್ನು ಸಾಕಾರಗೊಳಿಸಬೇಕು.



– ಸಿಂಧೂ ಎಂ.ಹೆಚ್. 7ನೇ ತರಗತಿ,
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅರಸನಾಳು, ಹರಪನಹಳ್ಳಿ .






### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

#### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ನಮ್ಮ ಮಕ್ಕಳಿಗೆ ನಾವು ಕೊಡಬಹುದಾದ ಅಮೂಲ್ಯ ಅನುಭವದ ನಿಧಿ

# ಮಕ್ಕಳ ಮನೆಪಾಠ ಒಂದು ಅನುಭವ

ಸಾರ್ ಬನ್ನಿ ಈ ದಿವಸ "ನಗೆ–ಕೊವೆ" ಹಳ್ಳಿಯ "ಮನೆ ಪಾಠದ ಮಕ್ಕಳ" ಜೊತೆಗೆ ಸ್ವಲ್ಪ ಸಮಯ ಕಳೆದು ಬರೋಣ ಅಂತ ನನಗೆ ಫೋನಾಯಿಸಿದ ಹಿರಿಯ ಕವಿಮಿತ್ರರೊಬ್ಬರಿಗೆ ಆಗೊದಿಲ್ಲ ಎನ್ನಲಾಗದೆ ಸರಿ ಬರುತ್ತೇನೆ ಎಂದು ವಾಗ್ದಾನ ಮಾಡಿ, ನಮ್ಮ ಕಡೆಯಿಂದ ಏನು ಸೇವೆಯನ್ನ ನಿರೀಕ್ಷೆ ಮಾಡುತ್ತೀರಿ? ಎಂದಾಗ ಅವರು ಹೇಳಿದ ಒಂದೇ ಒಂದು ಷರತ್ತು ಎಂದರೆ ನೀವು ಕಡ್ಡಾಯವಾಗಿ ನಿಮ್ಮ ಮಕ್ಕಳನ್ನ ಕರೆದುಕೊಂಡು ಬರಬೇಕು ಎಂದರು, ಆಯ್ತು ಸಾರ್ ಅಂದುಕೊಂಡವನೆ, ಹೇಗಿದ್ದರೂ ಭಾನುವಾರ ಮಕ್ಕಳಿಗೂ ಒಂದು ಹೊರ ವಿಹಾರ ವಾದೀತು, ಅದಕ್ಕೂ ಮುಂಚಿತವಾಗಿ ಪ್ರಸಾದದ ವ್ಯವಸ್ಥೆ ಇರುವುದಾಗಿ ಹೇಳಿದ್ದು ಮನಸ್ಸಿಗೆ ನಿರಾಳ ಎನಿಸಿದ್ದು ಸುಳ್ಳಲ್ಲ. ತತಕ್ಷಣ ಕಚೇರಿಯಿಂದಲೆ ನಮ್ಮಾಕಿಗೆ ಕರೆ ಮಾಡಿ ಹೀಗೀಗಂತೆ ಮತ್ತೆ ನೀನು ಮಕ್ಕಳೊಂದಿಗೆ ತಯಾರಾಗು ನಾನು ಕಚೇರಿಯಿಂದ ಬಂದ ತಕ್ಷಣ ಹೊರಡೋದೇ ಅಂದೆ,ಅವರಿಗೂ ಅಷ್ಟೇ ಸಾಕಿತ್ತು ಅಂತಾ ಕಾಣಿಸಿತ್ತು, ಅಯ್ಯೋ ಹೌದೇನ್ರೀ ಮತ್ತೆ ಈಗ ಹೇಳೋದಾ...? ಆಗಲೆ ಒಂದು ಗಂಟೆ ಆಯ್ತು ಹೊರಡಲಿಕ್ಕೆ ಇನ್ನು ಎರಡೇ ತಾಸು ಬಾಕಿ! ನಾನಿನ್ನೂ ತಯಾರಿ ಆಗಿಲ್ಲ ಅಂದವಳೆ ಫೋನ್ ರಪ್ ಅಂತ ಕಟ್ ಮಾಡಿದಳು.

ಸರಿ ಆಯ್ತೇನೆ ಲೇಟ್ ಆಗ್ತಿದೆ ಅಂದವನೆ ಕಾರಿನ ಕೀ ಎಲ್ಲೇ...? ಅಂದದ್ದಕ್ಕೆ ಅಯ್ಯೊ ಅಲ್ಲೆ ಎಲ್ಲಿಯಾದರು ಇರುತ್ತೆ ನೋಡಿ... ನನ್ನ ಲಿಪ್ ಸ್ಟಿಕ್ ಓಕೆನಾ? ಅಂದವಳೇ ಕೆಳಗಿಳಿದು ಬಂದು ಸೀದಾ ಕಾರಿನಲ್ಲಿ ಕುಳಿತು "ನಗೆ"ಯ(ಕ)ಡೆಗೆ ಹೊರಟೆವು. ಕೈಗಾ ವಸತಿ ಸಮುಚ್ಚಯದಿಂದ ಸುಮಾರು 22 ಕಿ ಮೀ ಕೈಗಾ –ಕಾರವಾರ ರಸ್ತೆಯ ಸಿದ್ದರ–ಕಿನ್ನರ ಮಾರ್ಗದಲ್ಲಿ ಎಡಕ್ಕೆ ತಿರುಗಿದ ನಾವು ಹಾಗೆ ಮತ್ತೊಂದೆರಡು ಮೂರು ಕಿ ಮೀ ಕ್ರಮಿಸಿದಾಗ ನಮಗೆ ನಗೆಕೊವೆಯ ಸರಕಾರಿ ಶಾಲೆ ಎದುರಾಯಿತು ಅಲ್ಲಿಂದ ಕಾರು ಮುಂದೆ ಸಾಗದ ಕಾರಣ ಕಾಲು(ಗಳಿಂದ)ದಾರಿಯಲ್ಲಿ ಮುಂದುವರಿಯಬೇಕಾಯಿತು, ಮಕ್ಕಳಿಗಂತೂ ಎಲ್ಲಿಲ್ಲದ ಖುಷಿ..! ದಾರಿಯುದ್ದಕ್ಕೂ ಹಚ್ಚಹಸಿರಿನ ಏರಿಳಿತಗಳು, ರಭಸದಿಂದ ಹರಿಯುತ್ತಿದ್ದ ಸಣ್ಣ ಸಣ್ಣ ನೀರಿನ ಹರಿವುಗಳು, ಅವುಗಳನ್ನ ದಾಟಿ ಮುಂದೆಸಾಗಲು ಸಹಕಾರಿಯಾದ ನಾಗರೀಕಥೆಯ ಕುರುಹುಗಳಾದ ಸಣ್ಣ ಸಣ್ಣ ಮೇಲ್ ಸೇತುವೆಗಳನ್ನ ದಾಟಿ ಮುಂದೆ ನೋಡಿದರೆ ಹಾಗೆ ದೂತ್ತನೆ ಕಣ್ನೋಟ...! ಹಿಗ್ಗಿದಂತಹ ಅನುಭವ...! ಹೃದಯ ಅರಳಿದಂತೆ.. ವಿಶಾಲಾವಾದ ಸುಮಾರು ಒಂದು ನೂರು ಎಕರೆಯಷ್ಟು ಗದ್ದೆಯ ಬಯಲು ಸುತ್ತಲು ಎತ್ತೆತ್ತರವಾದ ಬೆಟ್ಟಗಳು ಇವೆಲ್ಲವುಗಳ ಮದ್ಯೆದಲ್ಲಿ ದೊಡ್ಡದೊಂದು ಆಲದ ಮರ. ಅದರ ಪಕ್ಕದಲ್ಲೇ ಚಿಕ್ಕದೊಂದು ಪ್ರಾಂಗಣ, ಇದಕ್ಕೆ ಅಂಟಿಕೊಂಡಂತೆ ಸ್ವಲ್ಪ ಎತ್ತರದ ಜಗುಲಿಯೊಂದಿಗೆ ಸುಮಾರು ನೂರು ಜನ ಸೇರಬಹುದಾದ ಸುತ್ತಳತೆಯ ಮಹಾದೇವನ ಸುಂದರವಾದ ದೇವಸ್ಥಾನ, ಅದರ ಸಭಾಂಗಣದ ಮೇಲಸ್ತರದ ಜಗುಲಿಯಲ್ಲಿ ಶಿಸ್ತಿನಿಂದ ಕುಳಿತ "ಮನೆ ಪಾಠದ ಮಕ್ಕಳು"("ನಗೆ" ಗ್ರಾಮದರು) ಅವರುಗಳ ಮುಂದೆ ಸ್ವಲ್ಪವೇ ಕೆಳಸ್ತರದಲ್ಲಿ ಕುಳಿತ ನಾವು ಮತ್ತು ನಮ್ಮ ಮಕ್ಕಳು (ಸುಮಾರು ಅರವತ್ತು ಜನ) ಏನಾಗುತ್ತದೆ ಎಂಬ ಕಾತರದಲ್ಲಿ ಕಾಯುತಿದ್ದಾಗ, ಅಲ್ಲಿಯೇ ನಮ್ಮಿಬ್ಬರ ನಡುವೆ ಕುಳಿತಿದ್ದ ಗುರುಮಾತೆ ಶ್ರೀ ಮತಿ ದೀಪಾ ಪ್ರಶಾಂತರವರು (ಅವರನ್ನು ಆಚಾರ್ಯಾ ಎಂದು ಸಂಬೋಧಿಸುವ ಪರಿಪಾಠವಿದೆ. ವನವಾಸಿ ಶಿಕ್ಷಣ ವ್ಯವಸ್ಥೆಯಲ್ಲಿ ಗುರುಗಳನ್ನು ಆಚಾರ್ಯ/ಆಚಾರ್ಯಾ ಎನ್ನುತ್ತಾರೆಂದು ಸೇವಾ ಪ್ರಮುಖರಾದ ಶ್ರೀ ದಿವಾಕರ ಹೇಳಿದರು). ಅವರ ಪರಿಚಯ ಮಾಡಿಕೊಂಡು ಮುಂದಿನ ಕಾರ್ಯಕ್ರಮದ ವಿವರಣೆಯನ್ನ ನೀಡಿದಾಗಲೆ ಗೋತ್ತಾಗಿದ್ದು ಇದೊಂದು "ಮಕ್ಕಳ ಸಮ್ಮಿಲನ" ಎಂದು. ವನವಾಸಿಗಳು (ಅಂದರೆ ಸಹ್ಯಾದ್ರಿಯ ತಪ್ಪಲಿನಲ್ಲಿರುವ ದಟ್ಟ ಅರಣ್ಯದ ನಡುವೆ ಅಲ್ಲೊಂದಿಲ್ಲೊಂದು ಪುಟ್ಟ ಪುಟ್ಟ ಮನೆಗಳು ಗುಡಿಸಲುಗಳಲ್ಲಿ ವಾಸಿಸುತ್ತಾ ಪ್ರಕೃತಿಯನ್ನೇ ಬದುಕಾಗಿಸಿಕೊಂಡು ಜೀವನ ಸಾಗಿಸುವ 'ನಗೆ' ಗ್ರಾಮ ನಿವಾಸಿಗಳ ಮಕ್ಕಳು) ಮತ್ತು ನಗರ ನಿವಾಸಿಗಳು (ಯಾಂತ್ರೀಕರಣದ ನೆರಳಲ್ಲಿ ಜೀವನ ಸಾಗಿಸುತ್ತಿರವ ನಮ್ಮ ಕೈಗಾ ವಸತಿ ಸಮುಚ್ಚಯದ ನಿವಾಸಿಗಳ ಮಕ್ಕಳು) ಮತ್ತು ಮಕ್ಕಳ ಅಲ್ಲಿನ ಜನ ಆಚಾರ ವಿಚಾರ ಹಾಗೂ ಅವರ ಜೀವನ ಶೈಲಿಯ ಪರಿಚಯ ಮಾಡುವುದಾಗಿತ್ತು.





ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

ವಿಶೇಷವಾಗಿ ನಗರದ ಮಕ್ಕಳು ಕಲಿಯುವಂತಹದ್ದು ಎದ್ದು ಕಾಣುತಿತ್ತು. ಮನೆ ಪಾಠದ ಮಕ್ಕಳಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ವಿವಿಧ ಶ್ಲೋಕಗಳು, ಹಾಡುಗಳು, ಭಜನೆ, ದಾಸರ ಪದಗಳು, ವಚನಗಳು, ಕಥೆಯನ್ನ ಹೇಳಿದ್ದು, ವಿಶೇಷವಾಗಿ ಮಂಕುತಿಮ್ಮನ ಕಗ್ಗದ ಕೆಲವು ಶ್ಲೋಕಗಳನ್ನ ರಾಗವಾಗಿ ಹಾಡಿದ್ದು, ನಾಟಕ ಮತ್ತು ನೃತ್ಯವನ್ನು ಅಭಿನಯಸಿ ತೋರಿಸಿದ್ದು ಮತ್ತು ವಿಶೇಷವೆಂದರೆ ಈ ನಾಟಕ ಮತ್ತು ನೃತ್ಯಕ್ಕೆ ಬೇಕಾದ ಹಿನ್ನೆಲೆಯನ್ನ ಮಕ್ಕಳೇ ಹಾಡುತಿದ್ದುದ್ದು ಹೊಸದಾದ ಲೋಕವನ್ನೇ ದರ್ಶಿಸಿದ ಹಾಗೆ ಆಯಿತು. ಜೊತೆಗೆ ಎಲ್ಲಾ ಮೂಲಭೂತ ಹಾಗು ತಾಂತ್ರಿಕ ಸೌಲಭ್ಯಗಳನ್ನ ಹೊಂದಿರುವ ನಾವು ಆಯೋಜಿಸುವ ಕಾರ್ಯಕ್ರಮಗಳು ಮತ್ತು ಏನೂ ಇಲ್ಲದೆಯೂ ಇಷ್ಟೊಂದು ಸುಂದರ ಮನ ತಣಿಸುವಂತಹ ಆ ಮಕ್ಕಳ ಚಟುವಟಿಕೆಗಳನ್ನ ಕಂಡಾಗ ಒಮ್ಮೆ ಅವರೊಂದಿಗೆ ನಾವು ಮತ್ತು ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನ ತುಲನೆ ಮಾಡಿಕೊಂಡಾಂತಾಯಿತು. ಈ ಮಕ್ಕಳ ಚಟುವಟಿಕೆಗಳು ಮನಸ್ಸಿಗೆ ಆಹ್ಲಾದತೆಯನ್ನು ತಂದಿತು. ಹಾಗೆಯೇ ಅವರು ಮಾಡಿಟ್ಟ ಬಣ್ಣ ಬಣ್ಣದ ಹಳೆಯ ಅನುಪಯುಕ್ತ ಆಮಂತ್ರಣ ಪತ್ರಿಕೆಗಳಿಂದ ಮಾಡಿದ ವಿವಿಧ ಬಗೆಯ ಅಲಂಕಾರಿಕ ಕೈಕಸುಬುಗಳನ್ನು ನೋಡಿ ಆಶ್ಚರ್ಯವಾಯಿತು. ಕಸದಲ್ಲಿ ರಸವ ಹೆಕ್ಕುವ ಜಾಣ್ಮೆಯನ್ನು ಈ ಮಕ್ಕಳಿಗೆ ಆಚಾರ್ಯರು ಕಲಿಸಿದ್ದರು. ಇಲ್ಲಿಯ ಮಕ್ಕಳಾರು ಶಿಕ್ಷಣ ವಂಚಿತರಲ್ಲ ಇವರೆಲ್ಲ ಪ್ರತೀ ದಿನ ದಟ್ಟ ಕಾಡಿನ ನಡುವೆ ನಡೆದು ಹೋಗಿ ಒಂದನೆಯ ತರಗತಿಯಿಂದ ಹಿಡಿದು ಒಂಬತ್ತನೆಯ ತರಗತಿಯಲ್ಲಿ ಕನ್ನಡ ಸರಕಾರಿ ಶಾಲೆಯಲ್ಲಿ ಓದುವ ವಿಧ್ಯಾರ್ಥಿಗಳು.

ಸರಿ ಸುಮಾರು ಎರಡು ತಾಸುಗಳ ಈ "ಮಕ್ಕಳ ಸಮ್ಮಿಲ"ನದಲ್ಲಿ ನಮ್ಮ ಮಕ್ಕಳನ್ನ ಶಿಸ್ತಿನಿಂದ ಕುಳ್ಳಿರುವುಸುದರಲ್ಲಿಯೆ ಹೆಣಗಾಡುತಿದ್ದ ನಮ್ಮ ಪಾಲಕರು ಒಂದು ಕಡೆಯಾದರೆ ಅನಿವಾರ್ಯವಾಗಿ ಮಕ್ಕಳ ಕೈಗೆ ಮೋಬೈಲ್ ಇಟ್ಟು ಸುಮ್ಮನೆ ಕೂರಿಸಬೇಕಾಯಿತು. ಶಾಲಾ ಅವದಿ ಮುಗಿದ ನಂತರದ "ಮನೆ ಪಾಠದ ಮಕ್ಕಳ" ರೂಪದಲ್ಲಿ ಸಮಯದ ಸದುಪಯೋಗ ಪಡಿಸಿಕೊಳ್ಳುತ್ತಿರುವುದು ಅತ್ಯಂತ ಸೂಕ್ತವಾದ ಕ್ರಮ ಎಂದೆನಿಸಿತು. ಹಾಗಾದರೆ ನಮ್ಮ ಮಕ್ಕಳು ಅಂದರೆ ನಗರವಾಸಿಗಳು ಯಾವುದರಲ್ಲಿ ಹಿಂದೆ ಇದ್ದಾರೆ, ಅಥಾವ ನಮ್ಮ ಶಿಕ್ಷಣದಲ್ಲಿ ಏನು ಕೊರತೆಯಾಗಿದೆ, ಅವರು ಅದೇ ಪಠ್ಯವನ್ನೆ ಕಲಿಯುತ್ತಿದ್ದಾರೆ ನಮ್ಮ ಮಕ್ಕಳು ಇದೇ ಪಠ್ಯವನ್ನೆ ಕಲಿಯುತ್ತೀದ್ದಾರೆ, ಆ ಮಕ್ಕಳು ಇರುವುದರಲ್ಲೀಯೆ ಸಂತೃಪ್ತರಾಗಿದ್ದಾರೆ,ಪಠ್ಯದ ಜೊತೆ ಜೊತೆಗೆ ವಿವಿಧ ಶ್ಲೋಕಗಳು, ಹಾಡುಗಳು, ಭಜನೆ, ದಾಸರ ಪದ ಗಳು,ವಚನಗಳು,ಕಥೆಗಳು,ಮಂಕುತಿಮ್ಮನ ಕಗ್ಗದ ಹಾಡುಗಳನ್ನ ರಾಗವಾಗಿ ಹಾಡುವುದು, ನಾಟಕ ಮತ್ತು ನೃತ್ಯವನ್ನು ಅಭಿನಯಸಿದ್ದು, ಅತ್ಯಂತ ಸರಳ ಜೀವನ,ದುಬಾರಿಯಲ್ಲದ ಆಟಿಕೆಗಳು, ಜೊತೆಗೆ ಅತ್ಯುತ್ತಮ ಆರೋಗ್ಯ, ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿನ ಮಕ್ಕಳು ಮಕ್ಕಳಾಗಿದ್ದರು. ಹಾಗಂತ ನಮ್ಮ ಮಕ್ಕಳು ದಡ್ಡರೆಂದಲ್ಲ ನಮ್ಮ ಸಂಸ್ಕಾರ ಸಂಸ್ಕೃತಿಗಳ ಪರಿಚಯ ಹೊರತುಪಡಿಸಿ ದುಬಾರಿ ಬೆಲೆಬಾಳುವ ಆಟಿಕೆಗಳು ಇವೆ, ದುಬಾರಿಯ ಪುಸ್ತಕ, ಪೆನ್ನುಗಳಿವೆ, ಒಳ್ಳೆಯ ಬಟ್ಟೆಗಳಿವೆ, ಹೋಗಿಬರಲು ಸಾರಿಗೆಯ ಸೌಲಭ್ಯವಿದೆ, ಟೀವಿ, ಮೋಬೈಲ್, ಗಾಡಿ ಇನ್ನೇನು ಬೇಕು ನಮ್ಮ ಮಕ್ಕಳಿಗೆ!!!

ಆದರೂ ನಮ್ಮಲ್ಲಿ ಏನೋ ಕೊರತೆ ಇದೆ... ಏನದು...? ನಾವು ಎಲ್ಲಿ ಎಡುವುತಿದ್ದೇವೆ ನಾವು ನಮ್ಮ ಮಕ್ಕಳಿಗೆ ಅತಿಯಾದ ಸಲುಗೆ ಮತ್ತು ಸಲಕರಣೆಗಳನ್ನ ನೀಡುತಿದ್ದೇವೆ ಅನಿಸುತ್ತದೆಯೆ? ನಾವು ನಮ್ಮ ಮಕ್ಕಳಿಗೆ ನಿಜ ಸ್ಥಿತಿಯನ್ನ ಮರೆಮಾಚುತಿದ್ದೇವೆ ಅನಿಸಿತಿದ್ದೆಯೇ? ನಮ್ಮ ಮಕ್ಕಳನ್ನ ಅತಿಯಾಗಿ ನಾವು ಮಾತ್ರ ಪ್ರೀತಿಸಿತಿದ್ದೇವೆ ಎನ್ನುವ ಭ್ರಮೆಯಲ್ಲಿ ಇದ್ದೇವೆ ಅನಿಸುತ್ತಿಲ್ಲವೆ? ನಮ್ಮ ಮಕ್ಕಳಿಗೆ ನಾವು ತೋರಿಸುವ ಪ್ರೀತಿಯಲ್ಲಿ ಯಾವುದೇ ಕಾರಣಕ್ಕೂ ಕೊರತೆಯಾಗುವುದು ಬೇಡ, ಆದರೆ ಪಾಲಕರ ಜವಾಬ್ದಾರಿಯನ್ನ ಮರೆಯಬಾರದಲ್ಲವೆ? ಹಾಗಾದರೆ ಪಾಲಕರ ಜವಾಬ್ದಾರಿ ಏನು? ಕೇವಲ ನಮ್ಮ ಮಕ್ಕಳಿಗೆ ಬೇಕಾಗಿದ್ದನ್ನ ಅವರು ಕೇಳುವ ಮೊದಲೇ ನೀಡಿ ಅತ್ಯುತ್ತಮ ಪೋಷಕನಾಗುತಿದ್ದೇವೆ ಹೊರತು ಪಾಲಕನಾಗಬೇಕಲ್ಲವೇ? ಹಾಗಾದರೆ ಈ ಪಾಲನೆ ಮತ್ತು ಪೋಷಣೆ ಅರ್ಥ ನಮಗಾಗಿದೆಯೇ? ಎಂದು ಪ್ರಶ್ನಿಸಿಕೊಳ್ಳೂವ ಅಗತ್ಯತೆ ಈಗಿದೆ.

ಈ ವಿಷಯದ ಗಂಭೀರತೆ ಅರ್ಥ ಮಾಡಿಕೊಳ್ಳಬೇಕು ಹಾಗಂತ ಮಕ್ಕಳ ಮುಕ್ತ ಬೆಳವಣಿಗೆಗೆ ಮೂಬೈಲ್ ಆಗಲಿ, ಸಂವಾಹನ ಮಾದ್ಯಮವಾಗಲಿ, ಅತಿಯಾದ ಸಂಪನ್ಮೂಲವಾಗಲಿ, ಅಂತರ್ಜಾಲವಾಗಲಿ ಅಡ್ಡಿ ಎಂದು ನಾನು ಹೇಳ ಹೊರಟಿಲ್ಲ, ಹಾಗೆಯೇ ಎಲ್ಲರೂ ಕಾಡಿಗೆ, ಗುಡಿಸಲಿಗೆ ಹೋಗಿ ಇರುವುದು ಎಂದಲ್ಲ. ಮಕ್ಕಳೆಂದ ಮೇಲೆ ಮುಗ್ಧತೆಯು ಮತ್ತು ಮುಕ್ತತೆಯು ಇರಬೇಕಲ್ಲವೆ? ಏಕಂದರೆ ಅವರು ನಮ್ಮ ಮಕ್ಕಳು ನಮ್ಮತನದ ವಾರಸುದಾರರಲ್ಲವೆ? ಮೇಲಾಗಿ ನಮ್ಮ ಭವ್ಯ ಭಾರತದ ಭವಿತವ್ಯಕ್ಕೆ ಅವರೂ ಬದ್ಧರಲ್ಲವೆ? ಮೇಲಾಗಿ ಭವಿಷ್ಯದ ಪ್ರಜ್ಞಾವಂತ ಆರೋಗ್ಯ ವಂತ ಪ್ರಜೆಗಳಾಗಬೇಕಲ್ಲವೆ? ಅಭಿವೃದ್ಧಿಯ ಭಾರತದ ಜೊತೆ ಜೊತೆಗೆ ಆರೋಗ್ಯವಂತ ಭಾರತವನ್ನ ಕಟ್ಟುವುದೂ ನಮ್ಮ ಮೇಲಿರುವ ಮಹತ್ತರ ಜವಾಬ್ದಾರಿಯಲ್ಲವೆ? ಖಂಡಿತವಾಗಿಯೂ ಇಂತಹ ಹತ್ತು ಹಲವಾರು ಪ್ರಶ್ನೆ ನಮ್ಮಲ್ಲಿ ಮೂಡಿದ್ದು ಸುಳ್ಳಲ್ಲ. ಒಂದು "ಮನೆ ಪಾಠದ ಮಕ್ಕಳ" ಚಟುವಟಿಕೆಗಳು ಇಷ್ಟೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡುವ ಪ್ರಯತ್ನ ಮಾಡುತ್ತವೆ ಎನ್ನುವುದಾದರೆ ನೀವು ಯಾಕೆ ಒಮ್ಮೆ ಇಂತಹ ಮಕ್ಕಳ ಸತ್ಸಂಗದಲ್ಲಿ ಬಾಗವಹಿಸಬಾರದು? ಈ ಸತ್ಯವನ್ನು ಅರ್ಥೈಸಿಕೊಳ್ಳಲೇಬೇಕಾದ ಅನಿವಾರ್ಯ ನಮ್ಮ ನಿಮ್ಮೆಲ್ಲರ ಅತಿ ಮುಖ್ಯ ಜವಾಬ್ದಾರಿ.

ಕಾರ್ಯಕ್ರಮದ ನಂತರ ಮಳೆ–ಚಳಿಯ ಇಳಿ ಸಂಜೆಯಲ್ಲಿ ಉಪಹಾರದ ಜೊತೆಗೆ ಬಿಸಿ ಬಿಸಿಯಾದ ಕಷಾಯವನ್ನ ಸವಿದು ಅಲ್ಲಿಂದ ಸುರಕ್ಷಿತವಾಗಿ ನಮ್ಮ ಸಿಮೆಂಟಿನ ಗೂಡನ್ನ ಸೇರಿಕೊಂಡೆವು. ಇಂತಹ ಹತ್ತು ಹಲವಾರು "ಮನೆ ಪಾಠದ ಮಕ್ಕಳ" ಕೇಂದ್ರಗಳನ್ನು ವನವಾಸಿ ಕಲ್ಯಾಣದ ಮೂಲಕ ನಡೆಸುತ್ತಿರುವ ರಾಷ್ಟ್ರೀಯ ಸ್ವಯಂ ಸೇವಾ ಸಂಘಕ್ಕೆ, ಕಾರ್ಯಕ್ರಮದ ಮುಂಚುಣಿಯಲ್ಲಿದ್ದ ಕೈಗಾದ ನೇತಾಜಿ ಶಾಖೆಯ ಮಕ್ಕಳು, ಉತ್ತರ ಕನ್ನಡ ಜಿಲ್ಲೆಯ ಕೈಗಾ ಮತ್ತು ನಗೆ ಗ್ರಾಮದ ಜನತೆಗೆ, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಾರವಾರ ಮತ್ತು ಕೈಗಾದ ಸದಸ್ಯರುಗಳ ಕಾರ್ಯ ಶ್ಲಾಘನೀಯ.

# ಖೋ-ಖೋ ಕ್ರೀಡಾ ಸಾಧಕಿಗೆ ಬೇಕಿದೆ ಸಹಕಾರ

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಖೋ–ಖೋ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನವನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ತೋರಿಸುತ್ತಾ ಸಾಧನೆಗಳನ್ನು ಮಾಡುತ್ತಾ ಸಾಗುತ್ತಿದ್ದಾರೆ ಲಕ್ಷ್ಮಿಕಾಂತೇಶ ಸಿಂಗ್ರಿ.

ತಂದೆ–ಕಾಂತೇಶ, ತಾಯಿ–ಹೊನ್ನಮ್ಮ ಬ್ಯಾಡಗಿ ತಾಲೂಕಿನ ಹಾವೇರಿ ಜಿಲ್ಲೆಯ ಗ್ರಾಮವಾದ ಮುತ್ತೂರಿನಲ್ಲಿ ಜನಿಸಿದ್ದು ಪೋಷಕರಿಗೆ ಮೂರು ಮಕ್ಕಳಲ್ಲಿ ಎರಡು ಹೆಣ್ಣು ಒಂದು ಗಂಡು.ಇವರು ಮುತ್ತೂರಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ ಲಕ್ಷ್ಮಿ.

ಈ ಮಗುವಿನಲ್ಲಿದ್ದ ಕ್ರೀಡಾ ಸಾಮರ್ಥ್ಯವನ್ನು ಗಮನಿಸಿದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ವೀರೇಶ್ ಅರಳಿ ಮತ್ತು ಜಗದೀಶ್ ಗಡದ್ ಸಹಕಾರ ನೀಡಿ ರಾಷ್ಟ್ರಮಟ್ಟದ ವರೆಗೆ ಪಾಲ್ಗೊಳ್ಳಲು ತರಬೇತಿ ನೀಡಿ ಬೆಂಗಾವ ಲಾಗಿ ನಿಂತಿದ್ದಾರೆ. ತಂದೆ ಲಾರಿ ಡ್ರೈವರ್ ಆಗಿ ಕೆಲಸ ಮಾಡಿಕೊಂಡು ಮಕ್ಕಳಿಗೆ ಲಾಲನೆ ಪಾಲನೆಗೆ ಬೇಕಾದ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ. ಇವರಿಗೆ ಯಾವುದೇ ತರಹದ ಜಮೀನು ಪಿತ್ರಾರ್ಜಿತ ಆಸ್ತಿಗಳಾಗಲಿ ಇಲ್ಲ ಇವರು ಕೂಲಿ ಕೆಲಸ ವನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಲಕ್ಷ್ಮಿ ಓದಿನಲ್ಲಿ ಜಾಣೆ ಇದ್ದು,ಉತ್ತಮ ಅಂಕಗಳನ್ನು ಪಡೆಯುತ್ತಿದ್ದಾರೆ ಶ್ರಮವಹಿಸಿ ಕ್ರೀಡೆಯಲ್ಲಿ ಭಾಗವಹಿಸಿ ಪದಕಗಳನ್ನುಗಳಿಸಿ ಗ್ರಾಮಕ್ಕೆ ಮತ್ತು ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

ಖೋ–ಖೋ ಕ್ರೀಡೆ ಮಾತ್ರವಲ್ಲದೆ ಅಥ್ಲೆಟಿಕ್ಸಲ್ಲಿ ಕೂಡ ತನ್ನ ಸಾಧನೆಯನ್ನು ಮಾಡಿರುತ್ತಾರೆ 2024 ಮತ್ತು 25ನೇ ಸಾಲಿನಲ್ಲಿ 200 ಮೀಟರ್ ಓಟ ಹಾಗೂ ಅಡೆತಡೆ ಓಟದಲ್ಲಿ ರಾಜ್ಯಕ್ಕೆ ಆಯ್ಕೆಗೊಂಡು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಭರವಸೆ ಮೂಡಿಸಿದ್ದಾರೆ. ಇಲ್ಲಿಯವರೆವಿಗೂ ಶಾಲಾ ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು,ಶಾಲೆಯ ಮುಖ್ಯ ಶಿಕ್ಷಕರು,ಸಹಶಿಕ್ಷಕ ವೃಂದದವರು ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಸ್ಥಳೀಯರು ಸಹಕಾರ ನೀಡುತ್ತಾ ಬಂದಿದ್ದಾರೆ.

ಮುತ್ತೂರು ಚಿಕ್ಕಹಳ್ಳಿಯಾದರಿಂದ ಒಮ್ಮೆ ಸಹಕರಿಸಿದವರು ಮತ್ತೊಮ್ಮೆ ಸಹಕಾರ ನೀಡಲು ಕಷ್ಟ ಸಾಧ್ಯ ಈಗಾಗಲೇ ಒಮ್ಮೆ ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸಲು ಇವರಿಗೆ ವಿಮಾನದಲ್ಲಿ ಪ್ರಯಾಣಿಸಲು ಪ್ರಯಾಣ ವೆಚ್ಚಕ್ಕೆ ಆರ್ಥಿಕ ಸಹಕಾರ ನೀಡಿರುತ್ತಾರೆ.

ಈ ಪೂರಿಯ ಆಟವನ್ನು ಗಮನಿಸಿದ ಬೆಂಗಳೂರಿನ ಕಬೀರ್ ಫೌಂಡೇಶನ್ ರವರು 10,000 ನಗದು ರೂಪದ ಹಣವನ್ನು ಸಹಾಯ ಮಾಡಿರುತ್ತಾರೆ. ಈಗಾಗಲೇ ಲಕ್ಷ್ಮಿ ಅವರಿಗೆ ಸ್ಥಳೀಯರು,ತಾಲೂಕು ಹಾಗೂ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿ ಬಾಂಧವರು ಗೌರವಿಸಿ ಅಭಿನಂದಿಸಿರುತ್ತಾರೆ.




ಮುಂದಿನ ಕ್ರೀಡಾ ಜೀವನ ಯಶಸ್ವಿಯಾಗಬೇಕಾದರೆ ಮುಂದು ವರೆದ ಉತ್ತಮ ತರಬೇತಿ ಹಾಗೂ ಆರ್ಥಿಕ ಸಹಾಯದ ನಿರೀಕ್ಷೆಯಲ್ಲಿದ್ದಾರೆ ಲಕ್ಷ್ಮಿ . ಸ್ಥಳೀಯ ಶಾಸಕರು, ಉಸ್ತುವಾರಿ ಸಚಿವರು, ಸಂಘ ಸಂಸ್ಥೆಗಳು ಹಾಗೂ ದಾನಿಗಳು ಇವರ ನೆರವಿಗೆ ಬರಬೇಕಾಗಿದೆ.

ಬೆಳೆಯುವ ಮೊಳಕೆಯಲ್ಲಿ ಸರಿಯಾದ ರೀತಿ ರಕ್ಷಿಸಿದರೆ ಮುಂದೆ ಉತ್ತಮ ಫಲ ಕೊಡುವ ಮರ ಆಗುವುದರಲ್ಲಿ ಸಂದೇಹವಿಲ್ಲ ಎಂದು ಹೇಳುತ್ತಾರೆ ಇವರ ಈಗಿನ ತರಬೇತುದಾರರಾದ ಬ್ಯಾಡಗಿ ಸ್ಪೋರ್ಟ್ಸ್ ಕ್ಲಬ್ಬಿನ ಕೆ ಸಿ ಇಟ್ಟಿಗುಡಿ ಮತ್ತು ಮೃತ್ಯುಂಜಯ ಸ್ಪೋರ್ಟ್ಸ್ ಕ್ಲಬ್ಬಿನ ಶಿವಯೋಗಿ ಎಲಿ ಹಂಸಬಾವಿ ಹಾಗೂ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರು. ಕ್ರೀಡಾ ಸಹೃದಯ ಬಂಧುಗಳೇ ಈ ಕ್ರೀಡಾ ಸಾಧಕಿ ಕ್ರೀಡಾ ಸಾಧನೆಗೆ ನೇರವಾಗಿ ಇವರ ದೂರವಾಣಿ ಸಂಖ್ಯೆ–9380169670.

**ಕ್ರೀಡಾ ಸಾಧನೆಗಳು:–**

2001–2002ನೇ ಸಾಲಿನಲ್ಲಿ ದಾವಣಗೆರೆ ಇಲ್ಲಿ ನಡೆದ ಪ್ರಾಥಮಿಕ ರಾಜ್ಯಮಟ್ಟದ ಖೋ–ಖೋ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

2022–23 ಬಾಗೋಜಿ ಕೊಪ್ಪ, ಮೂಡಲಗಿ ತಾಲೂಕು ಇಲ್ಲಿ ನಡೆದ ಬೆಳಗಾಂ ವಿಭಾಗ ಮಟ್ಟದ ಖೋ–ಖೋ ಕ್ರೀಡೆಯಲ್ಲಿ ಭಾಗವಹಿಸಿದ್ದಾರೆ.

2023 24 ನಾಗನೂರು ಗೋಕಾಕ ತಾಲೂಕು ಇಲ್ಲಿ ನಡೆದ ಬೆಳಗಾಂ ವಿಭಾಗ ಮಟ್ಟದ ಖೋ–ಖೋ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ.

2024 25 ಮಸೂತಿ,ಬಿಜಾಪುರ ಇಲ್ಲಿ ನಡೆದ ಬೆಳಗಾವಿ ವಿಭಾಗ ಮಟ್ಟದ ಖೋ–ಖೋ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆ ಆಗಿರುತ್ತಾರೆ ಹಾಗೂ ಅತ್ಯುತ್ತಮ ಆಲ್–ರೌಂಡರ್ ಪ್ರಶಸ್ತಿ ಗಳಿಸಿದ್ದಾರೆ.

2024 25 ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಇಲ್ಲಿ ನಡೆದ ರಾಜ್ಯಮಟ್ಟದ ಖೋ–ಖೋ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮ ಆಲ್ ರೌಂಡರ್ ಪ್ರಶಸ್ತಿ ಯೊಂದಿಗೆ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

2024–25 ಅಯೋಧ್ಯ ಇಲ್ಲಿ ನಡೆದ ರಾಷ್ಟ್ರಮಟ್ಟದ ಸ್ಕೂಲ್ ಗೇಮ್ ಫೆಡರೇಶನ್ ಆಫ್ ಇಂಡಿಯಾ ಖೋ–ಖೋ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ಇದರೊಂದಿಗೆ ಹಾವೇರಿ ಜಿಲ್ಲಾ ಖೋ–ಖೋ ಅಸೋಸಿಯೇಷನ್ ಇವರ ಆಶ್ರಯದಲ್ಲಿ ಗುಂಜೂರು ಇಲ್ಲಿ ನಡೆದ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಮೃತ್ಯುಂಜಯ ಕ್ರೀಡಾ ಸಂಘದ ಪರವಾಗಿ ಉತ್ತಮ ಆಟ ಪ್ರದರ್ಶನ ತೋರಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಗೊಂಡು ತಿಪಟೂರು ಇಲ್ಲಿ ನಡೆದ ಖೋ–ಖೋ ಕ್ರೀಡಾಕೂಟದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಏಕಾಂತ



ಸಂಜೆ ತಂದಿದೆ ಏಕಾಂತ
ದಿಟ್ಟಿಸಿರುವೆ ಒಬ್ಬನೇ ದಿಗಂತ
ಮನಸ್ಸಿನ ಭಾವನೆ ಏನಂತ
ನಿನ್ನ ಬಳಿಸಾರಲು ಧಾವಂತ

ನೆನಪಲಿ ನೀನೇ ತುಂಬಿರುವೆ
ಮನದಲ್ಲಿ ಎಂದೂ ಕುಳಿತಿರುವೆ
ಇರದಿದ್ದರೂ ಇರುವಂತೆ ಅನಿಸಿರುವೆ
ವಿರಹವ ಕೊಂಚ ಮರೆಸಿರುವೆ

ಸುತ್ತಲ ಮೌನ ನೀರವತೆ
ಅತಿಯಾಗಿದೆ ಮನದ ಭಾವುಕತೆ
ನಿನ್ನಯ ಸಾಮಿಪ್ಯದ ಕೊರತೆ
ನಿನ್ನದೇ ಧ್ಯಾನದಿ ನಾ ಮರತೆ

**– ಚೇತನ ಭಾರ್ಗವ,** ಬೆಂಗಳೂರು

ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
9902909399, 9980559681
9740742251, 8073589125

# ಏಳು ದಿನ ಗವಿಶ್ರೀ ಕ್ರೀಡಾ ಉತ್ಸವ

## ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿಕೆ। ಜ.12 ರಿಂದ 18 ರವರೆಗೆ। ಸಾಂಪ್ರದಾಯಿಕ ಹಾಗೂ ದೇಶಿಯ ಕ್ರೀಡೆಗಳು

■ **ಹಂಪಿ ಟೈಮ್ಸ್ ಕೊಪ್ಪಳ**

ದಕ್ಷಿಣ ಭಾರತದ ಕುಂಭಮೇಳವೆಂದು ಪ್ರಸಿದ್ಧಿಯಾದ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ 2025ರ ಗವಿಶ್ರೀ ಕ್ರೀಡಾ ಉತ್ಸವವು ಜನವರಿ 12 ರಿಂದ 18 ರವರೆಗೆ ಕೊಪ್ಪಳ ನಗರದಲ್ಲಿ ನಡೆಯಲಿದೆ ಎಂದು ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಭಾನುವಾರ ಗವಿಶ್ರೀ ಕ್ರೀಡಾ ಉತ್ಸವ–2025 ಕುರಿತು ಮಾಹಿತಿ ನೀಡಲು ಕೊಪ್ಪಳ ನಗರದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೊಪ್ಪಳ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಸಹಭಾಗಿತ್ವದಲ್ಲಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಗವಿಶ್ರೀ ಕ್ರೀಡಾ ಉತ್ಸವ–2025ರ ಕ್ರೀಡಾಕೂಟದಲ್ಲಿ 19 ರೀತಿಯ ವಿವಿಧ ಸಾಂಪ್ರದಾಯಿಕ ಹಾಗೂ ದೇಶಿಯ ಕ್ರೀಡೆಗಳು ಮತ್ತು ಪ್ರದರ್ಶನ ಪಂದ್ಯಾವಳಿಗಳನ್ನು ಆಯೋಜಿಸ ಲಾಗಿದೆ. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಉಪಹಾರ, ಊಟದ ವ್ಯವಸ್ಥೆ ಮಾಡಿಸಲಾಗಿದೆ ಎಂದರು.

ಆಹ್ವಾನಿತ ತಂಡಗಳಿಂದ ಕ್ರಿಕೆಟ್ ಪಂದ್ಯಾವಳಿಯು ನಗರದ ತಾಲ್ಲೂಕ ಕ್ರೀಡಾಂಗಣದಲ್ಲಿ ಜ. 12 ಮತ್ತು 13 ರಂದು ಬೆಳಿಗ್ಗೆ 11 ಗಂಟೆಗೆ ಹಾಗೂ ಫೈನಲ್ ಪಂದ್ಯಾವಳಿ ಜ. 14 ರಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದ್ದು, ವಿಜೇತರಿಗೆ ಆಕರ್ಷಕ ಟ್ರೋಫಿ ನೀಡಲಾಗುವುದು. ಜ. 14 ರಂದು ಬೆಳಿಗ್ಗೆ 6.30ಕ್ಕೆ ಕೊಪ್ಪಳ ನಗರದ ಕಿತ್ತೂರು ಚೆನ್ನಮ್ಮ ಸರ್ಕಲ್, ಅಶೋಕ ಸರ್ಕಲ್, ಕಿನ್ನಾಳ ರೋಡ್, ಭಾಗ್ಯನಗರ ಕ್ರಾಸ್, ಭಾಗ್ಯನಗರ, ಲೇಬರ್ ಸರ್ಕಲ್, ಸಿಂಪಿ ಲಿಂಗಣ್ಣ ರಸ್ತೆ ಮೂಲಕ ಗಡಿಯಾರ ಕಂಬ ಮಾರ್ಗವಾಗಿ ಗವಿಮಠ ಆವರಣದವರೆಗೆ ಪುರುಷ ಮತ್ತು ಮಹಿಳೆಯರಿಗೆ 12 ಕಿ.ಮಿ. ಮ್ಯಾರಥಾನ್ ಓಟ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 20,000 ರೂ., ದ್ವಿತೀಯ 15,000 ರೂ., ತೃತೀಯ 12,000 ರೂಪಾಯಿ ಹಾಗೂ ಒಟ್ಟು ಎಂಟು ಹಂತಗಳಲ್ಲಿ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ಹೇಳಿದರು.

ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ಜ. 14 ರಂದು ಬೆಳಿಗ್ಗೆ 11 ಗಂಟೆಗೆ ಗವಿಮಠದ ರಥದ ಹತ್ತಿರ ಏರ್ಪಡಿಸಲಾಗಿದ್ದು, ಪ್ರಥಮ 10,000 ರೂ., ದ್ವಿತೀಯ ದ್ವಿತೀಯ 8000 ರೂ., ತೃತೀಯ 6000 ರೂ., ನಾಲ್ಕನೇ



ಬಹುಮಾನ 4,000 ರೂಪಾಯಿ ಹಾಗೂ ಭಾಗವಹಿಸಿದವರೆಲ್ಲರಿಗೂ ಉಡುಗೊರೆ ನೀಡಲಾಗುತ್ತದೆ. ಜ. 15 ರಂದು ಬೆಳಿಗ್ಗೆ 10 ಗಂಟೆಗೆ ಗವಿಮಠ ಆವರಣದಲ್ಲಿ ಆಕರ್ಷಕ ಮಲ್ಲಕಂಬ ಪ್ರದರ್ಶನ ಜರುಗಲಿದ್ದು, ಹೊಳೆಆಲೂರಿನ ಜ್ಞಾನ ಸಿಂಧು ಅಂಧ ಮಕ್ಕಳ ಶಾಲೆ, ಸಿರಗುಪ್ಪದ ಯೋಗ ಮಲ್ಲಕಂಬ ತಂಡ ಮತ್ತು ಕೊಪ್ಪಳದ ಮಹಿಳಾ ಮಲ್ಲಕಂಬ ತಂಡ ಪಾಲ್ಗೊಳ್ಳಲಿದ್ದಾರೆ ಎಂದರು. ಜ. 15 ರಂದು ಬೆಳಿಗ್ಗೆ 11 ಗಂಟೆಗೆ ಗವಿಮಠ ಆವರಣದಲ್ಲಿ ನಡೆಯಲಿರುವ ಯುವಕರ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯು ಮುಕ್ತ ಆಹ್ವಾನವಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6000 ರೂ.ಗಳ ಬಹುಮಾನವಿದೆ. ಅಂದು ಬೆಳಿಗ್ಗೆ 9.30ಕ್ಕೆ ಗವಿಮಠ ಆವರಣದಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಶ್ವಾನ ಪ್ರದರ್ಶನವಿರುತ್ತದೆ. ಜ. 16ರಂದು ಬೆಳಿಗ್ಗೆ 10 ಗಂಟೆಗೆ ಕರಾಟೆ ಪ್ರದರ್ಶನವಿದೆ. ಬೆಳಿಗ್ಗೆ 10 ಗಂಟೆಗೆ ಯುವಕರಿಂದ ಎತ್ತಿನ ಬಂಡಿ ಜಗ್ಗುವ ಸ್ಪರ್ಧೆ ಜರುಗಲಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6000 ರೂ. ಬಹುಮಾನವಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಆಹ್ವಾನಿತ ರಾಷ್ಟ್ರ ಹಾಗೂ ರಾಜ್ಯ ಮಟ್ಟದ, ಪುರುಷ ಮತ್ತು ಮಹಿಳಾ ಕುಸ್ತಿ ಪಟುಗಳಿಂದ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಕೊಪ್ಪಳ ಕೇಸರಿಗೆ ಬೆಳ್ಳಿ ಗಧೆ ನೀಡಲಾಗುವುದು. ತಾಲ್ಲೂಕ ಕ್ರೀಡಾಂಗಣದಲ್ಲಿ ಸಂಜೆ 4 ಗಂಟೆಗೆ ನಡೆಯುವ ಪುರುಷ ವಿಕಲಚೇತನರ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ 15,000 ರೂ., ದ್ವಿತೀಯ 13,000 ರೂ., ತೃತೀಯ 10,000 ರೂ.ಗಳ ಬಹುಮಾನವಿರುತ್ತದೆ. ಅಂದು ಬೆಳಿಗ್ಗೆ 10 ಗಂಟೆಗೆ ತಾಲ್ಲೂಕ ಕ್ರೀಡಾಂಗಣದಲ್ಲಿ ಮಹಿಳೆಯರಿಗೆ ಥ್ರೋಬಾಲ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು, ಪ್ರಥಮ 20,000 ರೂ., ದ್ವಿತೀಯ 18,000 ರೂ., ತೃತೀಯ 15,000 ರೂ. ಮತ್ತು ನಾಲ್ಕನೇ ಸ್ಥಾನಕ್ಕೆ 12,000 ರೂ.ಗಳ ಬಹುಮಾನವಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪುರುಷರ ಡಬಲ್ಸ್ ಶೆಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ 15,000 ರೂ., ದ್ವಿತೀಯ 12,000 ರೂ., ತೃತೀಯ 10,000 ರೂ., ನಾಲ್ಕನೇ ಸ್ಥಾನಕ್ಕೆ 5,000 ರೂ.ಗಳ ಬಹುಮಾನ ಸಿಗಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ತಾಲ್ಲೂಕ ಕ್ರೀಡಾಂಗಣದಲ್ಲಿ 15 ವರ್ಷದ ಒಳಗಿನ ಮಕ್ಕಳಿಗಾಗಿ ಹಮ್ಮಿಕೊಂಡ ಛದ್ಮವೇಷ/ ಫ್ಯಾಷನ್ ಷೋನಲ್ಲಿ ಪ್ರಥಮ 15,000 ರೂ., ದ್ವಿತೀಯ 12,000 ರೂ., ತೃತೀಯ 10,000 ರೂ. ಬಹುಮಾನವಿದ್ದು, ಭಾಗವಹಿಸಿದವರೆಲ್ಲರಿಗೂ ಆಕರ್ಷಕ ಬಹುಮಾನ ನೀಡಲಾಗುವುದು. ಅಂದು ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಹಗ್ಗ ಜಗ್ಗಾಟ ಸ್ಪರ್ಧೆ ಏರ್ಪಡಿಸಲಾಗಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6,000 ರೂ.ಗಳ ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಜ. 17 ರಂದು ಸಂಜೆ 5 ಗಂಟೆಯಿಂದ ತಾಲ್ಲೂಕ ಕ್ರೀಡಾಂಗಣದಲ್ಲಿ ಆಹ್ವಾನಿತ ಪುರುಷರ ದೇಹದಾರ್ಢ್ಯತೆ (ಃಂಜಥಿ ಃಣುಟಜುಟಿರ) ಸ್ಪರ್ಧೆಯಲ್ಲಿ ನೂರಕ್ಕೂ ಅಧಿಕ ಸ್ಪರ್ಧಿಗಳು ಭಾಗವಹಿಸಲಿದ್ದು, ಮೊದಲ ಮೂವತ್ತು ವಿಜೇತರಿಗೆ ಬಹುಮಾನ ನೀಡಲಾಗುವುದು. ಒಡಿ. ಏಂಂಂಜಿಟ ಪ್ರಶಸ್ತಿಯನ್ನು ಸಹ ಪ್ರದಾನ ಮಾಡಲಾಗುತ್ತದೆ. ಅಂದು ಬೆಳಿಗ್ಗೆ 10 ಗಂಟೆಗೆ ಪುರುಷ ಹಾಗೂ ಮಹಿಳೆಯರ ಮುಕ್ತ ವಾಲಿಬಾಲ್ ಪಂದ್ಯಾವಳಿಗಳು ನಡೆಯಲಿದ್ದು, ಫೈನಲ್ ಪಂದ್ಯಾವಳಿ ಜ. 18ರ ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಜರುಗಲಿದೆ. ಇದರಲ್ಲಿ ವಿಜೇತರಾದವರಿಗೆ ಪ್ರಥಮ 30,000 ರೂ., ದ್ವಿತೀಯ 25,000 ರೂ, ತೃತೀಯ 20,000 ರೂ., ಚತುರ್ಥ 15,000 ರೂ. ಮತ್ತು ಆಕರ್ಷಕ ಟ್ರೋಫಿ ಸಿಗಲಿದೆ. ಜ. 17ರ ಬೆಳಿಗ್ಗೆ 10 ಗಂಟೆಗೆ ಪುರುಷ ಹಾಗೂ ಮಹಿಳೆಯರಿಗೆ ಮುಕ್ತ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಂಡಿದ್ದು, ಫೈನಲ್ ಪಂದ್ಯಾವಳಿ ಜ. 18ರ ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಜರುಗಲಿದೆ. ಇದರಲ್ಲಿ ಪ್ರಥಮ ಬಹುಮಾನ ರೂಪಾಯಿ 30,000 ರೂ., ದ್ವಿತೀಯ 25,000 ರೂ., ತೃತೀಯ – 20,000 ರೂ., ಚತುರ್ಥ 15,000 ರೂ. ಮತ್ತು ಆಕರ್ಷಕ ಟ್ರೋಫಿ ದೊರೆಯಲಿದೆ. ಜ. 17ರ ಬೆಳಿಗ್ಗೆ 10 ಗಂಟೆಯಿಂದ 12 ಗಂಟೆವರೆಗೆ ಗವಿಮಠ ಆವರಣದಲ್ಲಿ ಸಾರ್ವಜನಿಕರಿಗೆ ಮುಕ್ತ ಗಾಳಿಪಟ ಹಾರಟ ಸ್ಪರ್ಧೆ ಏರ್ಪಡಿಸಲಾಗಿದ್ದು, ಭಾಗವಹಿಸಿದ ಎಲ್ಲರಿಗೂ ಆಕರ್ಷಕ ಉಡುಗೊರೆ ಸಿಗಲಿದೆ. ಅಲ್ಲದೇ ಅಂದು ಮಧ್ಯಾಹ್ನ 1 ರಿಂದ ಸಂಜೆ 6 ಗಂಟೆಯವರೆಗೆ ದೇಶದ ಪ್ರಸಿದ್ಧ 5 ತಂಡಗಳಿಂದ ಬೃಹತ್ ಗಾತ್ರದ ಗಾಳಿಪಟ ಪ್ರದರ್ಶನ ಮತ್ತು ರಾತ್ರಿ 10 ರಿಂದ 12 ಗಂಟೆವರೆಗೆ ಎಲ್.ಇ.ಡಿ ಗಾಳಿಪಟ ಪ್ರದರ್ಶನ ಜರುಗಲಿದೆ. ಜನವರಿ 17ರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಿಂದ ಗವಿಮಠದ ವರೆಗೆ ಎತ್ತಿನ ಬಂಡಿ ಶೃಂಗಾರ ಸ್ಪರ್ಧೆ ಹಮ್ಮಿಕೊಂಡಿದ್ದು, ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬೆಳ್ಳಿಯ ಎತ್ತು ಬಂಡಿ, ದ್ವಿತೀಯ ಬೆಳ್ಳಿಯ ಬಂಡಿ, ತೃತೀಯ ಬೆಳ್ಳಿಯ ಎತ್ತು ಬಹುಮಾನದ ರೂಪದಲ್ಲಿ ನೀಡಲಾಗುವುದು. ಸಾಂಪ್ರದಾಯಿಕ, ಜನಪದ ಶೈಲಿಯಲ್ಲಿ ಎತ್ತು ಬಂಡಿಗಳನ್ನ ಬಣ್ಣ ಹಚ್ಚಿ ಶೃಂಗಾರಗೊಳಿಸಿದ ರೈತನು ಕೂಡ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ್, ಮಾಜಿ ಸಂಸದರಾದ ಕರಡಿ ಸಂಗಣ್ಣ, ಮುಖಂಡರಾದ ಸಿ.ವಿ. ಚಂದ್ರಶೇಖರ್, ಮಾಜಿ ಜಿ.ಪಂ ಸದಸ್ಯ ಗೂಳಪ್ಪ ಹಲಗೇರಿ, ಕೊಪ್ಪಳ ನಗರಸಭೆ ಸದಸ್ಯರಾದ ರಾಜಶೇಖರ ಆಡೂರ, ಅಜೀಂ ಅತ್ತರ್, ಅರುಣ್ ಅಪ್ಪು ಶೆಟ್ಟಿ ಸೇರಿದಂತೆ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಗರ್ಭಕೋಶದ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ

## ಸ್ತ್ರೀರೋಗ ತಜ್ಞ ವೈದ್ಯೆ ಶಶಿಕಲಾ ಗುಗ್ರಿ ಹೇಳಿಕೆ। ಅಕ್ಕನಬಳಗದಲ್ಲಿ ಉಚಿತ ಲಸಿಕಾ ಶಿಬಿರ





■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಕ್ಕನ ಬಳಗವು ವಿಜಯನಗರ ಸ್ತ್ರೀರೋಗ ತಜ್ಞ ವೈದ್ಯರ ಸಹಯೋಗದಲ್ಲಿ ಭಾನುವಾರ ಅಕ್ಕನ ಬಳಗದ ಸಭಾಂಗಣದಲ್ಲಿ 50 ಮಕ್ಕಳಿಗೆ ಭವಿಷ್ಯದಲ್ಲಿ ಎದುರಾಗದಂತೆ ಗರ್ಭಕೋಶದ ಕ್ಯಾನ್ಸರ್ ತಡೆಗಟ್ಟುವ ಲಸಿಕೆಯನ್ನು ಉಚಿತವಾಗಿ ನೀಡಿದರು.

ಸ್ತ್ರೀರೋಗ ತಜ್ಞವೈದ್ಯೆ ಶಶಿಕಲಾ ಗುಗ್ರಿ ಮಾತನಾಡಿ, ಇದು ಎಚ್‌ಪಿವಿ ವ್ಯಾಕ್ಸೀನ್ ಆಗಿದ್ದು ಗರ್ಭ ಕೊಳದ ಕ್ಯಾನ್ಸರ್ ತಡೆಗಟ್ಟುವ ಲಸಿಕೆಯಾಗಿದೆ. ಇದನ್ನು 9 ವರ್ಷದ ಮಕ್ಕಳಿಂದ 35 ವರ್ಷದ ವರೆಗಿನ ಮಹಿಳೆಯರು ಚಿಕಿತ್ಸೆ ಹಾಕಿಸಿಕೊಂಡು ಈ ಪ್ರಯೋಜನ ಪಡೆದುಕೊಳ್ಳಬಹುದು. 9 ರಿಂದ 15 ವರ್ಷದ ಒಳಗಿನವರು ಕೇವಲ ಎರಡು ಲಸಿಕೆ ತೆಗೆದುಕೊಳ್ಳಬೇಕು. 15ರಿಂದ 35 ರವರೆಗೆ 3 ಲಸಿಕೆ ತೆಗೆದುಕೊಂಡಲ್ಲಿ ಗರ್ಭಕೋಶದ ಕ್ಯಾನ್ಸರ್ ತಡೆಗಟ್ಟಲು ಸಹಕಾರಿಯಾಗಲಿದೆ ಎಂದರು.

ಅಕ್ಕನ ಬಳಗದ ಅಧ್ಯಕ್ಷೆ ಪ್ರಭ ಸಿಂದಗಿ, ಕಾರ್ಯದರ್ಶಿ ವನಿತಾ ಶಿವಶಂಕರ್, ಖಜಾಂಚಿ ಗಂಗಮ್ಮ ಕೊತ್ತಂಬರಿ, ಹಿರಿಯ ಸದಸ್ಯರಾದ ಗೌರಮ್ಮ ಗಂಗಾಧರಪ್ಪ, ಗಂಗಮ್ಮ ಎ, ಭಾರತಿ ದಿನೇಶ್ ಹಾಗೂ ವೈದ್ಯರಾದ ಡಾ. ಸುಮಂಗಲ ಹೊಂಗಲ್, ಡಾ. ಹೇಮ ಲತಾ, ಡಾ. ತನುಜಾ ಹುಬ್ಬಿ, ಡಾ. ಅಂಜನಾ ರಾಜೀವ್ ಸೇರಿದಂತೆ ಇತರರು ಇದ್ದರು.

> 82 ಜನ ಸ್ವ ಇಚ್ಛೆಯಿಂದ ವ್ಯಾಕ್ಸಿನೇಷನ್ ಹಾಕಿಸಿಕೊಂಡಿದ್ದು, ಇವರಲ್ಲಿ 50 ಜನರಿಗೆ ಉಚಿತ ವ್ಯಾಕ್ಸಿನ್ ಹಾಕಲಾಗಿದೆ. ಮಕ್ಕಳ ಭವಿಷ್ಯದ ಆರೋಗ್ಯಕ್ಕೆ ಎಚ್‌ಪಿವಿ ಲಸಿಕೆ ಹಾಕಿಸಿಕೊಳ್ಳುವುದು ಉತ್ತಮ.
> **– ವನಿತಾ ಶಿವಶಂಕರ್** ಕಾರ್ಯದರ್ಶಿ, ಅಕ್ಕನಬಳಗ, ಹೊಸಪೇಟೆ

# ಬೆಂಬಲ ಯೋಜನೆಯಡಿ ತೊಗರಿ ಉತ್ಪನ್ನ ಖರೀದಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ। ಮಧ್ಯವರ್ತಿಗಳ ಸಂಪರ್ಕಿಸಬೇಡಿ

■ **ಹಂಪಿ ಟೈಮ್ಸ್ ಬಳ್ಳಾರಿ**



ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ಬೆಂಗಳೂರಿನ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ, ಬಳ್ಳಾರಿ ಶಾಖೆ ವತಿಯಿಂದ ಎಫ್‌ಎಕ್ಯೂ ಗುಣಮಟ್ಟದ ತೊಗರಿ ಉತ್ಪನ್ನ ಖರೀದಿಸಲಾಗುತ್ತಿದೆ ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ನಿಗಧಿಪಡಿಸಿದ ಬೆಂಬಲ ಬೆಲೆಯಂತೆ ಪ್ರತಿ ಕ್ವಿಂಟಾಲ್‌ಗೆ ರೂ.7550 ರಂತೆ ರೈತರಿಂದ ಖರೀದಿಸಲಾಗುತ್ತದೆ. ಬಳ್ಳಾರಿ ನಗರದ ಎಸ್‌ಪಿ ವೃತ್ತದ ಹತ್ತಿರದ ಮಾರುತಿ ನಗರದ 2ನೇ ಕ್ರಾಸ್‌ನ ರೈತರ ಸೇವಾ ಸಹಕಾರ ಸಂಘ ನಿಯಮಿತವು ಖರೀದಿ ಕೇಂದ್ರವಾಗಿದೆ. (ದೂ.08392–2200202)

**ಬೇಕಾದ ದಾಖಲೆ:** ಆಧಾರ್‌ಕಾರ್ಡ್, ಪ್ರಸ್ತಕ ಸಾಲಿನ ಪಹಣಿ ಪತ್ರ, ಎಫ್‌ಐಡಿ ಕಡ್ಡಾಯ, ರೈತರು ತಮ್ಮ ಹೆಸರನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಹೆಸರು ನೋಂದಾಯಿಸಿರಬೇಕು. ಬ್ಯಾಂಕ್ ಖಾತೆ ಪುಸ್ತಕದ ನಕಲು ಪ್ರತಿ.



ರೈತರಲ್ಲಿ ಫ್ರೂಟ್ಸ್ ಐಡಿ ಇಲ್ಲದೇ ಇದ್ದಲ್ಲಿ ಅಥವಾ ಫ್ರೂಟ್ಸ್ ನಲ್ಲಿ ಯಾವುದಾದರೂ ತಾಂತ್ರಿಕ ದೋಷ ವಿದ್ದಲ್ಲಿ ರೈತರು ಕೃಷಿ ಇಲಾಖೆ ಸಂಪರ್ಕಿಸಿ ಅವಶ್ಯಕ ಮಾಹಿತಿ ಪಡೆಯಬಹುದು.

ಒಣಗಿದ ಹಾಗೂ ಸ್ವಚ್ಛ ಎಫ್‌ಎಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಕೇಂದ್ರಕ್ಕೆ ಮಾರಾಟ ಮಾಡಲು ತರಬೇಕು. ತೊಗರಿ ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು ಜ.02 ರಿಂದ 75 ದಿನಗಳೊಳಗೆ ನೋಂದಾಯಿಸಿಕೊಳ್ಳಬೇಕು ಹಾಗೂ ನೋಂದಣಿ ಚೀಟಿ ಪಡೆಯಬೇಕು. ನಿಗಧಿತ ಅವಧಿಯೊಳಗೆ ನೋಂದಾಯಿಸಿಕೊಂಡ ರೈತರಿಂದ ಪ್ರತಿ ಎಕರೆಗೆ 04 ಕ್ವಿಂಟಾಲ್‌ನಿಂದ ಗರಿಷ್ಠ 40 ಕ್ವಿಂಟಾಲ್ ಮಾತ್ರ ಖರೀದಿಸಲಾಗುವುದು. ತೊಗರಿ ಉತ್ಪನ್ನವನ್ನು 90 ದಿನಗಳವರೆಗೆ ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಮಾತ್ರ ಖರೀದಿಸಲಾಗುತ್ತದೆ.

ರೈತರು ಮಧ್ಯವರ್ತಿಗಳ ಮೊರೆ ಹೋಗ ಬಾರದು, ರೈತರೇ ನೇರವಾಗಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC:

## ವಿಷಯ : ಕನ್ನಡ (ಪ್ರ.ಭಾ) ಕನ್ನಡ ವ್ಯಾಕರಣ – ಕನ್ನಡ ವರ್ಣಮಾಲೆ.

**1. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 49 ಅಕ್ಷರಗಳಿವೆ.

**2. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಸ್ವರಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 13 ಸ್ವರಗಳಿವೆ.

**3. ಸ್ವರಗಳಲ್ಲಿ ಎಷ್ಟು ವಿಧ ? ಅವು ಯಾವುವು ?**
ಉತ್ತರ– ಸ್ವರಗಳಲ್ಲಿ ಮೂರು ವಿಧಗಳಿವೆ. ಅವು ಯಾವೆಂದರೆ 1. ಹ್ರಸ್ವ ಸ್ವರಗಳು 2 . ಧೀರ್ಘಸ್ವರಗಳು 3. ಪ್ಲುತ ಸ್ವರಗಳು.

**4. ಹ್ರಸ್ವ ಸ್ವರಗಳು ಎಂದರೇನು ?**
ಉತ್ತರ– ಒಂದು ಮಾತ್ರ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಹ್ರಸ್ವ ಸ್ವರಗಳು ಎನ್ನುವರು.

**5. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಹ್ರಸ್ವ ಸ್ವರಗಳಿವೆ ?**
ಉತ್ತರ–– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 6 ಹ್ರಸ್ವ ಸ್ವರಗಳಿವೆ.

**6. ದೀರ್ಘ ಸ್ವರಗಳು ಎಂದರೇನು ?**
ಉತ್ತರ– ಎರಡು ಮಾತ್ರ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ದೀರ್ಘ ಸ್ವರಗಳು ಎನ್ನುವರು.

**7. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ದೀರ್ಘ ಸ್ವರಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ 7 ದೀರ್ಘ ಸ್ವರಗಳಿವೆ.

**8. ಪ್ಲುತಸ್ವರಗಳು ಎಂದರೇನು ?**
ಉತ್ತರ– ಮೂರು ಅಥವಾ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಪ್ಲುತಸ್ವರಗಳು ಎನ್ನುವರು.

**9. ವ್ಯಂಜನಗಳು ಎಂದರೇನು ?**
ಉತ್ತರ– ಸ್ವತಂತ್ರವಾಗಿ ಉಚ್ಚಾರ ಮಾಡಲು ಬಾರದ ಹಾಗೂ ಸ್ವರಗಳ ಸಹಾಯದಿಂದ ಉಚ್ಚಾರ ಮಾಡಬೇಕಾದ ಅಕ್ಷರಗಳನ್ನು ವ್ಯಂಜನಗಳು ಎನ್ನುವರು.

**10. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ವ್ಯಂಜನಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 34 ವ್ಯಂಜನಗಳಿವೆ.

**11. ವ್ಯಂಜನಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?**
ಉತ್ತರ– ವ್ಯಂಜನಗಳಲ್ಲಿ ಎರಡು ವಿಧಗಳಿವೆ. ಅವು ಯಾವುವೆಂದರೆ 1. ವರ್ಗೀಯ ವ್ಯಂಜನಗಳು 2. ಅವರ್ಗೀಯ ವ್ಯಂಜನಗಳು.

**12. ವರ್ಗೀಯ ವ್ಯಂಜನಗಳು ಎಂದರೇನು ?**
ಉತ್ತರ– ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳಿಗೆ ಅನುಗುಣವಾಗಿ ಐದೈದು ಅಕ್ಷರಗಳಿಗೆ ಒಂದೊಂದು ವರ್ಗವಾಗಿ ವಿಂಗಡಿಸಿರುವ ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎನ್ನುವರು.

**13.ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ವರ್ಗೀಯ ವ್ಯಂಜನಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 25 ವರ್ಗೀಯ ವ್ಯಂಜನಗಳಿವೆ.

**14. ವರ್ಗೀಯ ವ್ಯಂಜನಗಳನ್ನು ಎಷ್ಟು ಭಾಗಗಳಾಗಿ ವಿಂಗಡಿಸಲಾಗಿದೆ ? ಅವು ಯಾವುವು ?**
ಉತ್ತರ– ವರ್ಗೀಯ ವ್ಯಂಜನಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. 1. ಅಲ್ಪ ಪ್ರಾಣ ಅಕ್ಷರಗಳು 2. ಮಹಾಪ್ರಾಣ ಅಕ್ಷರಗಳು 3. ಅನುನಾಸಿಕ ಅಕ್ಷರಗಳು.

**15. ಅಲ್ಪಪ್ರಾಣ ಅಕ್ಷರಗಳು ಎಂದರೇನು ?**
ಉತ್ತರ– ಕಡಿಮೆ ಉಸಿರುನೊಡನೆ ಉಚ್ಚರಿಸುವ ಅಕ್ಷರಗಳನ್ನು ಅಲ್ಪಪ್ರಾಣ ಅಕ್ಷರಗಳು ಎನ್ನುವರು.

**16. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಲ್ಪಪ್ರಾಣ ಅಕ್ಷರಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 10 ಅಲ್ಪ ಪ್ರಾಣ ಅಕ್ಷರಗಳಿವೆ. (ಪ್ರತಿವರ್ಗದ ಒಂದನೆಯ ಮತ್ತು ಮೂರನೆಯ ಅಕ್ಷರಗಳು)

**17. ಮಹಾಪ್ರಾಣ ಅಕ್ಷರಗಳು ಎಂದರೇನು ?**
ಉತ್ತರ– ಹೆಚ್ಚು ಉಸಿರಿನೊಡನೆ ಉಚ್ಚರಿಸುವ ಅಕ್ಷರಗಳನ್ನು ಮಹಾಪ್ರಾಣ ಅಕ್ಷರಗಳು ಎನ್ನುವರು. (ಪ್ರತಿವರ್ಗದ ಎರಡನೆಯ ಮತ್ತು ನಾಲ್ಕನೆಯ ಅಕ್ಷರಗಳು)

**18. ಅನುನಾಸಿಕ ಅಕ್ಷರಗಳು ಎಂದರೇನು ?**
ಉತ್ತರ– ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು ಅನುನಾಸಿಕ ಅಕ್ಷರಗಳು ಎನ್ನುವರು.

**19. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅನುನಾಸಿಕಾಕ್ಷರಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 5 ಅನುವಾಸಿಕಾಕ್ಷರಗಳಿವೆ. ( ಪ್ರತಿವರ್ಗದ ಐದನೆಯ ಅಕ್ಷರಗಳು)

**20.ಅವರ್ಗೀಯ ವ್ಯಂಜನಗಳು ಎಂದರೇನು ?**
ಉತ್ತರ– ಅಂತಸ್ಥವರ್ಣಗಳಾದ ಯ,ವ,ರ,ಲ,ಳ ಅಕ್ಷರಗಳು ಹಾಗೂ ಊಷ್ಮ ವರ್ಣಗಳಾದ ಶ, ಷ,ಸ,ಹ ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳು ಬೇರೆ ಬೇರೆಯಾಗಿದ್ದು, ಅವನ್ನು ವರ್ಗೀಕರಿಸಲಾಗದ ಕಾರಣ ಆ ಅಕ್ಷರಗಳನ್ನು ಅವರ್ಗೀಯ ವ್ಯಂಜನಗಳು ಎನ್ನುವರು.

**21. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅವರ್ಗೀಯ ವ್ಯಂಜನಗಳಿವೆ ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ ಒಟ್ಟು 9 ಅವರ್ಗೀಯ ವ್ಯಂಜನಗಳಿವೆ.

**22.ಯೋಗವಾಹಗಳು ಎಂದರೇನು ?**
ಉತ್ತರ– ಸ್ವತಂತ್ರವಾದ ಉಚ್ಚಾರವಿಲ್ಲದ ಸ್ವರದ ಮುಂದೆ ಬಂದಾಗ ಮಾತ್ರ ಉಚ್ಚಾರವಾಗುವ ಅಕ್ಷರಗಳನ್ನು ಯೋಗವಾಹಗಳು ಎನ್ನುವರು.

**23. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಯೋಗವಾಹ ಅಕ್ಷರಗಳಿವೆ ? ಅವು ಯಾವುವು ?**
ಉತ್ತರ– ಕನ್ನಡ ವರ್ಣಮಾಲೆಯಲ್ಲಿ 2 ಯೋಗವಾಹ ಅಕ್ಷರಗಳಿವೆ. ಅವು ಯಾವುವೆಂದರೆ 1. ಅನುಸ್ವಾರ = 0 2. ವಿಸರ್ಗ = ಃ

**24. ಸಂಯುಕ್ತಾಕ್ಷರ ಎಂದರೇನು ?**
ಉತ್ತರ– ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು ಸಂಯುಕ್ತಾಕ್ಷರ ಎನ್ನುವರು?

**25. ಸಂಯುಕ್ತಾಕ್ಷರ ಗಳಲ್ಲಿ ಎಷ್ಟು ವಿಧಗಳಿವೆ? ಅವು ಯಾವುವು?**
ಉತ್ತರ– ಸಂಯುಕ್ತಾಕ್ಷರಗಳಲ್ಲಿ 2 ಬಗೆಗಳಿವೆ. 1. ಸಜಾತಿ ಸಂಯುಕ್ತಾಕ್ಷರ 2. ವಿಜಾತಿ ಸಂಯುಕ್ತಾಕ್ಷರ.

**26. ಸಜಾತಿ ಸಂಯುಕ್ತಾಕ್ಷರ ಎಂದರೇನು? ಉದಾಹರಣೆ ಕೊಡಿ.**
ಉತ್ತರ– ಒಂದೇ ಜಾತಿಯ ಎರಡು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು ಸಜಾತಿ ಸಂಯುಕ್ತಾಕ್ಷರ ಎನ್ನುವರು.
ಕ್ + ಕ್ + ಅ= ಕ್ಕ ತ್ + ತ್ + ಅ =ತ್ತ
ಉದಾ : ಅಪ್ಪ, ಅಕ್ಕ, ಅಜ್ಜ, ಕಜ್ಜ ಇತ್ಯಾದಿ.


27. ವಿಜಾತಿ ಸಂಯುಕ್ತಾಕ್ಷರ ಎಂದರೇನು ? ಉದಾಹರಣೆ ಕೊಡಿ.
ಉತ್ತರ– ಬೇರೆ ಬೇರೆ ಜಾತಿಯ ಎರಡು ಅಥವಾ ಮೂರು ವ್ಯಂಜನಗಳು ನಡುವೆ ಸ್ವರವಿಲ್ಲದ ಸೇರಿ ಅವುಗಳ ಮುಂದೆ ಸ್ವರವು ಸೇರಿದರೆ ಅದನ್ನು ವಿಜಾತಿ ಸಂಯುಕ್ತಾಕ್ಷರ ಎನ್ನುವರು.
ಷ್ + ಟ್ + ರ್ +ಅ = ಸ್ + ತ್ +ಅ = ಸ್ತ
ಉದಾ: ಉಷ್ಣ , ಅಸ್ತ್ರ , ಅಕ್ಷರ ಇತ್ಯಾದಿ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಉತ್ತಮ ಆರೋಗ್ಯಕ್ಕಾಗಿ
ಗಾಣದ ಪರಿಶುದ್ಧ ಎಣ್ಣೆ ಬಳಸಿ
# ಜಂಗಮಸೋವೆನಹಳ್ಳಿ, ಕೂಡ್ಲಿಗಿ ತಾಲೂಕು, ವಿಜಯನಗರ ಜಿಲ್ಲೆ
ಶೇಂಗ ಎಣ್ಣೆ
ಕೊಬ್ಬರಿ ಎಣ್ಣೆ
ಶ್ರೀಶಂಕರಎಂಟರ್‌ಪ್ರೈಸಸ್‌ಲಿ.
CONTACT FOR WHOLESALE
& RETAIL COLD PRESSED OIL
M:90083 66606



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 06–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.17 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8146 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 77.045 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.03 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.238 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

07–01–2025 – ಮಂಗಳವಾರ

| | |
|---|---|
| ತಿಥಿ | : ಷಷ್ಠೊ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಭಾದ್ರಪದ |
| ಯೋಗ | : ವೃತಾಪತಾ |
| ಕರಣ | : ಕೌಳವ |
| ಸೂರ್ಯೋದಯ | : 07:11:01 |
| ಸೂರ್ಯಾಸ್ತ | : 17:55:43 |
| ರಾಹು ಕಾಲ | : 15:15–16:35 |
| ಯಮಘಂಡ ಕಾಲ | : 09:52–11:13 |
| ಗುಳಿಕ ಕಾಲ | : 12:33–13:54 |

# ಮಕ್ಕಳ ಭವಿಷ್ಯದ ಶಿಕ್ಷಣ ಆಯ್ಕೆಗೆ ಎಸ್‌ಎಸ್‌ಎಲ್‌ಸಿ ಮೈಲುಗಲ್ಲು

## ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ಹೇಳಿಕೆ । ಪರೀಕ್ಷೆ ಒಂದು ಹಬ್ಬ ಕಾರ್ಯಾಗಾರ



■ **ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಒಂದು ಮೈಲುಗಲ್ಲು. ಭವಿಷ್ಯದ ಶಿಕ್ಷಣ ಆಯ್ಕೆಗೆ ಮಾರ್ಗಸೂಚಿಯಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವಿದೆ. ಬರೆಯುತ್ತೇನೆ ಎಂಬ ಆತ್ಮವಿಶ್ವಾಸವನ್ನು ಬಲಪಡಿಸಿಕೊಂಡರೆ ಪರೀಕ್ಷೆಯನ್ನು ಉತ್ತಮವಾಗಿ ಬರೆದು ಹೆಚ್ಚಿನ ಅಂಕಗಳಿಸಲು ಸಾಧ್ಯವಿದೆ ಎಂದು ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ಹೇಳಿದರು.

ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ ಹೊಸಪೇಟೆ ಹಾಗೂ ಪ್ರೌಢಶಾಲಾ ಮುಖ್ಯಗುರುಗಳ ಸಹಯೋಗದೊಂದಿಗೆ 2024–25ನೇ ಸಾಲಿನ ಎಸ್ ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಒಂದು ಹಬ್ಬ ಸಂಭ್ರಮಿಸಿ ಕಾರ್ಯಾಗಾರವನ್ನು ಉದ್ಘಾಟಿಸಿ ಸೋಮವಾರ ಮಾತನಾಡಿದರು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರಿಗೆ ಪ್ರತ್ಯೇಕವಾಗಿ ಮಾರ್ಗದರ್ಶನ ಮತ್ತು ಪರೀಕ್ಷೆ ಸಿದ್ಧತೆ ಹೇಗೆ ಮಾಡಿಕೊಳ್ಳಬೇಕೆನ್ನುವುದರ ಕುರಿತು ವಿಶೇಷ ಕಾರ್ಯಾಗಾರ ಹಮ್ಮಿಕೊಂಡಿದೆ. ವಿದ್ಯಾರ್ಥಿಗಳು ಪ್ರಯೋಜನಪಡೆದು ಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಗ್ಗದ ಚನ್ನಬಸಪ್ಪ ಮಾತನಾಡಿ, ಈಗಾಗಲೇ ಶಿಕ್ಷಣ ಇಲಾಖೆಯಿಂದ ಮಕ್ಕಳ ಫಲಿತಾಂಶ ಪ್ರಗತಿಗೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಮಕ್ಕಳನ್ನು ತರಬೇತಿಗೊಳಿಸಲಾಗುತ್ತಿದೆ. ಪರೀಕ್ಷೆಗೆ ಈಗಿನಿಂದಲೇ ಸಿದ್ದರಾಗಬೇಕು. ಯಾವುದೇ ಕ್ಷಣದಲ್ಲಿ ತರಗತಿಗಳಲ್ಲಿ ಪರೀಕ್ಷೆ ನಡೆಸಿದರೂ ಸಿದ್ಧರಿದ್ದೇವೆ ಎಂಬ ಮಾತುಗಳು ವಿದ್ಯಾರ್ಥಿಗಳಿಂದ ಹೊರಹೊಮ್ಮಬೇಕು. ಶಿಕ್ಷಕರು ಮಕ್ಕಳ ಸಾಮರ್ಥ್ಯವನ್ನು ಅರಿತು ಅರ್ಥವಾಗುವ ನಿಟ್ಟಿನಲ್ಲಿ ಭೋಧನೆ ಮಾಡಬೇಕು ಎಂದರು.ಉಪನಿರ್ದೇಶಕರ ಕಚೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಸಿಬ್ಬಂದಿ, ಮುಖ್ಯಗುರುಗಳು, ಶಿಕ್ಷಕರು ಇದ್ದರು. ಸವಿತಾ ರಮೇಶ್ ಮತ್ತು ತಂಡದವರು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಮತ್ತು ಪರೀಕ್ಷೆಗೆ ಸಿದ್ದಗೊಳ್ಳುವ ಬಗೆ ಕುರಿತು ತಿಳಿಸಿದರು.



# ಮನೆ ಮನೆಗೆ ಶಾಸಕರು

**ಮೊದಲ ಪುಟದಿಂದ**

ಎನ್ನುವುದು ಪ್ರಜ್ಞಾವಂತರ ಅನಿಸಿಕೆಯಾಗಿದೆ. ಐಷರಾಮಿಯಾಗಿ ಎಲ್ಲೋ ಕುಳಿತು, ಅನುದಾನ ಇಲ್ಲ, ನಾನೇನು ಮಾಡಲಿ ಎನ್ನುವ ಬದಲು, ಇರುವ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ, ಸೌಲಭ್ಯಗಳಿಂದ ವಂಚಿತರಾದವರಿಗೆ ಅನುಕೂಲ ಕಲ್ಪಿಸಲು ಕ್ಷೇತ್ರದ ಪ್ರತಿಯೊಂದು ಮನೆ ಬಾಗಿಲಗಳಿಗೆ ಸ್ವಯಂ ಶಾಸಕರೇ ಹೋಗುವುದು ಅತ್ಯಂತ ಸೂಕ್ತವಾದ ಕೆಲಸವಾಗಿದೆ. ತಾಲೂಕು ಅಧಿಕಾರಿಗಳು ಜೊತೆಯಲ್ಲಿ ಇರುವುದರಿಂದ ತ್ವರಿತವಾಗಿ ಪರಿಹಾರ ಸಿಗುತ್ತದೆ.

**ಸಮೀಕ್ಷೆಗೆ ಮೊದಲು ಗಡಿಭಾಗ:** ಆರಂಭದಲ್ಲಿ ತಾಲೂಕಿನ ಗಡಿಭಾಗದಲ್ಲಿರುವ ಅಪ್ಪೇನಹಳ್ಳಿ ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಪ್ರತಿ ಮನೆಯ ಸರ್ವೇಗೆ ಈಗಾಗಲೇ ಸ್ಥಳೀಯ ಯುವಕರ ತಂಡವು ಯಶಸ್ವಿ ಕಾರ್ಯಾಚರಣೆಗೆ ಇಳಿದಿದ್ದು, ಸೋಮವಾರ ರಾಯಾಪುರ ಗ್ರಾಮದ ಪರಮೇಶ್ವರ ಸ್ವಾಮಿಯ ಮಠದಲ್ಲಿ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಅವರು ಈ ಮಹತ್ವಕಾರ್ಯಕ್ಕೆ ಸಾಕ್ಷಿಯಾಗಿದ್ದಾರೆ. ಸರ್ವೇ ಕಾರ್ಯ ಮುಗಿಯುತ್ತಿದ್ದಂತೆ, ಗ್ರಾಪಂ ಕೇಂದ್ರ ಸ್ಥಾನದಲ್ಲಿ ತಾಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಕರೆಸಿಕೊಂಡು ಸಂಗ್ರಹಿಸಿದ ಪಟ್ಟಿಯ ಮಾಹಿತಿಯಲ್ಲಿ ಸ್ಥಳದಲ್ಲೇ ಬಗೆಹರಿಯುವ ಸಮಸ್ಯೆಗಳಿಗೆ ಮುಕ್ತಿ ಕೊಡಿಸುವುದು ಇದರ ಹಿಂದಿನ ಉದ್ದೇಶವಾಗಿದೆ.

**ಯುವಕರ ದಂಡು:** ಸ್ಥಳೀಯ ಯುವ ಸಮುದಾಯವನ್ನು ಶಾಸಕರು ಬಳಿಸಿಕೊಂಡು ಅವರಿಗೆ ಗೌರವಧನವನ್ನು ನೀಡುವ ಮೂಲಕ, 160 ಸಮಸ್ಯೆಗಳನ್ನು ಕಲೆ ಹಾಕುವ ವಿನೂತನ ಮೊಬೈಲ್ ತಂತ್ರಜ್ಞಾನದ ಮೂಲಕ ಸಿದ್ಧಪಡಿಸಿದ ಮಾಹಿತಿಗಳನ್ನು ಕ್ಷೇತ್ರಾದ್ಯಂತ 8 ರಿಂದ 10 ತಿಂಗಳು ಆಗಬಹುದು. ಇದರಿಂದ ಯುವಕರಿಗೂ ಸ್ಥಳೀಯ ಮಟ್ಟದಲ್ಲಿ ಯಾವ ಸಮಸ್ಯೆಗಳಿಂದ ಬಳಲುತ್ತಿದ್ದೇವೆ ಎಂಬ ಅರಿವು ಅವರಿಗಾಗಲಿ ಎಂಬುದು ಶಾಸಕರ ದೂರದೃಷ್ಟಿಯೂ ಇದಾಗಿದೆ. ಸುಖಾ ಸುಮ್ಮನೇ ಕೆಲಸವಿಲ್ಲದೆ, ಅಲೆದಾಡುವುದು ತಪ್ಪಿಸದಂತಾಗಿದೆ. ಇದರಿಂದ ಕ್ಷೇತ್ರದ ಯುವಕರಿಗೆ ಹೇಳಿಕೊಳ್ಳಲಾರದಷ್ಟು ಖುಷಿಯಾಗಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com

## ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ: ಇಂದು ತರಬೇತಿ ಹಾಗೂ ಸಂವಾದ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ:**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುನಿಸೆಫ್–ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರ ಸಹಯೋಗದಲ್ಲಿ "ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ" ಎಂಬ ವಿಷಯದ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಜನವರಿ 7 ರಂದು ಬೆಳಿಗ್ಗೆ 10.15ಕ್ಕೆ ಜಿಲ್ಲಾ ಪಂಚಾಯತ್ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕೊಪ್ಪಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ನಲಿನ್ ಅತುಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ವಿಶೇಷ ಆಹ್ವಾನಿತರಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಪಾಲ್ಗೊಳ್ಳುವರು. ಮುಖ್ಯ ಅತಿಥಿಗಳಾಗಿ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಜ.08 ಜಿಲ್ಲಾ ಮಟ್ಟದ ಸಮನ್ವಯ – ಪರಿಶೀಲನಾ ಸಮಿತಿ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜ.08 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸಭೆಯು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ತಿಳಿಸಿದ್ದಾರೆ.

ಸಭೆಯಲ್ಲಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆಯ ಅಧಿನಿಯಮ 2005 ನಿಯಮ 2006ರ ವಿಷಯ, ಕೇಂದ್ರ ಸರ್ಕಾರದ 'ಸಖಿ' ಒನ್ ಸ್ಟಾಪ್ ಸೆಂಟರ್, ಬಾಲ್ಯ ವಿವಾಹ ನಿಷೇಧ ಕೋಶ, ಬಾಲಕಿಯರ ವಸತಿ ನಿಲಯ, ಸಾಂತ್ವನ ಯೋಜನೆ, ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಣಿಕೆ ತಡೆ ಯೋಜನೆ, ರಾಜ್ಯ ಮಹಿಳಾ ನಿಲಯ ವ್ಯವಸ್ಥಾಪಕರ ಸಮಿತಿ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಯೋಜನೆ ಮತ್ತು ಮಹಿಳಾ ಸಬಲೀಕರಣ ಘಟಕ ಸೇರಿದಂತೆ ವಿಷಯಗಳ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

# ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವಜನಿಕರು, ತಮ್ಮ ಕುಂದುಕೊರತೆಗಳನ್ನು, ಅಹವಾಲುಗಳನ್ನು ಹಾಗೂ ಸಾರ್ವಜನಿಕರು ತಮ್ಮ ಸರ್ಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ/ಸಿಬ್ಬಂದಿಯವರ ದುರಾಡಳಿತಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸಲ್ಲಿಸಲು ಲೋಕಾಯುಕ್ತ ಜನ ಸಂಪರ್ಕ ಸಭೆಯನ್ನು ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಶೀಲವಂತ ಹೊಸಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸಪೇಟೆ ಘಟಕದ ವತಿಯಿಂದ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರುಗಳ ನೇತೃತ್ವದಲ್ಲಿ ಜ.8 ರಂದು ಹೊಸಪೇಟೆಯ ತಾಪಂ ಸಭಾಂಗಣದಲ್ಲಿ ಬೆ.11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ, ಜ.21 ರಂದು ಹಗರಿಬೊಮ್ಮನಹಳ್ಳಿ ತಾಪಂ ಸಭಾಂಗಣದಲ್ಲಿ ಬೆ.11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ, ಜ.24 ರಂದು ಹೂವಿನಹಡಗಲಿ ತಾಪಂ ಸಭಾಂಗಣದಲ್ಲಿ ಬೆ.11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಮ್ಮಿಕೊಂಡಿರುತ್ತದೆ. ಸಾರ್ವಜನಿಕರು ಸದುಪಯೋಗ ಪಡಿಸಿ ಕೊಂಡು ಕುಂದು ಕೊರತೆ ಸೇರಿದಂತೆ ಪರಿಹಾರಕ್ಕೆ ಸಭೆಯಲ್ಲಿ ಭಾಗವಹಿಸಬೇಕು ಎಂದು ಕೋರಿದ್ದಾರೆ.

# ಕಿಮ್ಸ್ ನೂತನ 450 ಹಾಸಿಗೆಯ ಆಸ್ಪತ್ರೆಗೆ ಸಚಿವ ಶಿವರಾಜ ತಂಗಡಗಿ ಭೇಟಿ, ಪರಿಶೀಲನೆ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಮೆಡಿಕಲ್ ಕಾಲೇಜಿನ ಪಕ್ಕದಲ್ಲಿ ನೂತವಾಗಿ ಆರಂಭವಾಗುತ್ತಿರುವ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 450 ಹಾಸಿಗೆಯ ಆಸ್ಪತ್ರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನೂತನ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿದ ಸಚಿವರು, ಈ ಆಸ್ಪತ್ರೆಯನ್ನು ಮುಖ್ಯ ಮಂತ್ರಿಗಳಿಂದ ಉದ್ಘಾಟಿಸಲಾಗುವುದು. ಇದರ ಕೆಲಸ ಆದಷ್ಟು ಬೇಗನೆ ಮುಗಿಯಬೇಕು. ಉಳಿದ ಇತರೆ ಸಣ್ಣ ಪುಟ್ಟ ಕೆಲಸಗಳನ್ನು ಜನವರಿ 20 ರೊಳಗಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಕಿಮ್ಸ್ ನಿರ್ದೇಶಕರು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಫೆಬ್ರವರಿ ಮೊದಲ ಅಥವಾ ಎರಡನೇ ವಾರದಲ್ಲಿ ಈ ಆಸ್ಪತ್ರೆ ಉದ್ಘಾಟನೆ ಮಾಡಲಾಗುವುದು. ಆಸ್ಪತ್ರೆಯ ಎಲ್ಲಾ ವಿಭಾಗಗಳ ಕೆಲಸ ಮತ್ತು ಕಾರ್ಯಗಳು ಉತ್ತಮ ಗುಣಮಟ್ಟದ ರೀತಿಯಲ್ಲಿ ಮಾಡಬೇಕು. 450 ಬೆಡ್‌ಗಳ ಈ ಆಸ್ಪತ್ರೆಯಿಂದ ನಮ್ಮ ಭಾಗದ ಜನರಿಗೆ ಒಳ್ಳೆಯ ಆರೋಗ್ಯ ಸೇವೆ ಸಿಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮಜದ್ ಪಟೇಲ್, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಕೊಪ್ಪಳ ಕಿಮ್ಸ್ ನಿರ್ದೇಶಕ ಡಾ.ವಿಜಯನಾಥ ಇಟಗಿ, ಕಿಮ್ಸ್ ಮುಖ್ಯ ಆಡಳಿತಾಧಿಕಾರಿ ಬಿ.ಕಲ್ಲೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us